# ಮಾನವ ಅನುಭವ ದರ್ಶನ

## ಮಧ್ಯಸ್ಥ ದರ್ಶನ – ಭಾಗ ೪


ಪ್ರಸ್ತಾಪಕ –

**ಮುಗಲೂರು ಅಗ್ರಹಾರ ನಾಗರಾಜ್**

**(ಮೂಲತಃ ಹಿಂಧಿ ಭಾಷೆಯಲ್ಲಿ)**


**ಊಹೆ – ವ್ಯಾಪಕ ಜ್ಞಾನ ಮತ್ತು ಪ್ರಕೃತಿಯ ಅನಾದಿತ್ವ.**

**ಸಿದ್ಧಾಂತ - ಶ್ರಮೆ – ಗತಿ – ಪರಿಣಾಮ**


ಸಂಯುಕ್ತ ಹಿಂಧಿ-ಕನ್ನಡ ಸಂಸ್ಕರಣ

ದಿವ್ಯ ಪಥ ಸಂಸ್ಥಾನ

ಅಮರ್ಕಂಟಕ್

ಭಾಷಾಂತರಕಾರರ ಟಿಪ್ಪಣಿ

ಮಧ್ಯಸ್ಥ ದರ್ಶನದ ಗ್ರಂಥಗಳು ಮೂಲತಃ ಹಿಂದಿ ಭಾಷೆಯಲ್ಲಿವೆ. ಪೂಜ್ಯ ಶ್ರೀ ಎ. ನಾಗರಾಜ್ ನವರ ಸಲಹೆ ಹಾಗು ಪ್ರೇರಣೆಯಿಂದ ನಾನು ಇದರ ಕನ್ನಡ ಭಾಷಾಂತರ ಮಾಡಲಾರಂಭಿಸಿದೆ. ಮಧ್ಯಸ್ಥ ದರ್ಶನದ ಹಾಗು ಅದರ ಪರಿಷ್ಕರಣೆಯ ಅಧಿಕಾರ ಶ್ರೀ ಎ. ನಾಗರಾಜ್ ನವರದಾಗಿದ್ದು, ಈ ಭಾಷಾಂತರದ ಜವಾಬ್ದಾರಿಯನ್ನು ನಾನು ವಹಿಸುತ್ತೇನೆ. ಕನ್ನಡ ಭಾಷೆಯಲ್ಲಿ ನನ್ನ ಸಾಮರ್ಥ್ಯ ಸಾಧಾರಣ. ಮಧ್ಯಸ್ಥ ದರ್ಶನದ ವಿದ್ಯಾರ್ಥಿಯಾಗಿ, ಇದನ್ನು ನಾನು ನನ್ನ ಅಧ್ಯಯನದ ಕ್ರಮದಲ್ಲಿ ಒಂದು ಸಹಾಯಕ ಹಾಗು ಪುಷ್ಟಿದಾಯಕ ಅಭ್ಯಾಸವೆಂದು ಪರಿಗಣಿಸುತ್ತೇನೆ. ಈ ಭಾಷಾಂತರದಲ್ಲಿ ಪರಿಷ್ಕರಣೆಗೆ ಅವಕಾಶವಿದೆ. ಮಧ್ಯಸ್ಥ ದರ್ಶನದಲ್ಲಿ ಅಧ್ಯಯನ ರತರಾದವರು ಹಾಗು ಈ ಭಾಷಾಂತರ ಕಾರ್ಯವನ್ನು ಪಠಿಸುವವರು, ಶಿಕ್ಷಣದಲ್ಲಿ ಪ್ರಯೋಗಿಸುವವರು, ನೀಡುವ ಆಲೋಚನೆ ಹಾಗು ಸಲಹೆಯ ಆಧಾರದಮೇಲೆ  ಇದರ ಪರಿಷ್ಕರಣವಾಗುತ್ತಲಿರುತ್ತದೆ.  ಈ ಭಾಷಾಂತರದಿಂದ ಶ್ರೀ ಎ. ನಾಗರಾಜ್ ಪ್ರತಿಪಾದಿಸಿರುವ ಮಧ್ಯಸ್ಥ ದರ್ಶನದ ಮೂಲ ಪ್ರತಿಪಾದನೆಯನ್ನು ಕನ್ನಡಭಾಷಿಯರಿಗೆ  ಸುಲಭಸಾಧ್ಯವಾಗಲೆಂದು ನಾನು ಆಶಿಸುತ್ತೇನೆ.

ಗೌರಿ ಶ್ರೀಹರಿ

(ಅಮರ್ಕಂಟಕ್)

gowrisrihari@gmail.com

ಹೆಚ್ಚು ಮಾಹಿತಿಗೆ HYPERLINK "http://www.madhyasth-darshan.info/"www.madhyasth-darshan.info ನೋಡಿ

*The final version will have the original Hindi text along with the kannda text. This book is to be always read with the original in Hindi. Due to technical reasons the Hindi version has not been incorporated here. The original book in Hindi is provided in the zip file. Please download it and read it along with the kannda version.*

*ಅಂತಿಮ ಸಂಸ್ಕರಣವು ಕನ್ನಡ ಭಾಷೆಯ ಪಠ್ಯದೊಂದಿಗೆ ಮೂಲ ಹಿಂದಿ ಪಠ್ಯವನ್ನು ಹೊಂದಿರುತ್ತದೆ. ಈ ಪುಸ್ತಕವನ್ನು ಯಾವಾಗಲು ಮೂಲ ಹಿಂದಿ ಭಾಷೆಯ ಪುಸ್ತಕದ ಜೊತೆ ಓದುವುದೇ ಉತ್ತಮ. ತಾಂತ್ರಿಕ ಕಾರಣಗಳಿಂದ ಮೂಲ ಹಿಂದಿ ಪಠ್ಯವನ್ನು ಇಲ್ಲಿ ಅಳವಡಿಸಲಾಗಿಲ್ಲ. ಹಿಂದಿ ಭಾಷೆಯ ಮೂಲ ಪುಸ್ತಕವನ್ನು ಜಿಪ್ ಫೈಲ ನಲ್ಲಿ ಒದಗಿಸಲಾಗಿದೆ. ದಯವಿಟ್ಟು ಅದನ್ನು ಡೌನ್ಲೋಡ್ ಮಾಡಿ ಅದನ್ನು ಕನ್ನಡ ಪುಸ್ತಕದೊಂದಿಗೆ ಓದಿ.*

## ಪೀಠಿಕೆ (ದ್ವಿತೀಯ ಸಂಸ್ಕರಣೆ)

ಈ ಅನುಭವ ದರ್ಶನ ಸಹ ಅಸ್ತಿತ್ವ ರೂಪಿ ಅಸ್ತಿತ್ವದಲ್ಲಿ ಅನುಭವ ಮತ್ತು ಅದರ ಮಹಿಮೆ ಹಾಗು ಹಿರಿಮೆಯ ಅಭಿವ್ಯಕ್ತಿ. ಅಸ್ತಿತ್ವದಲ್ಲಿ ಸಹ ಅಸ್ತಿತ್ವ, ಸಹಅಸ್ತಿತ್ವ ದಲ್ಲಿ ವಿಕಾಸ, ವಿಕಾಸಕ್ರಮದಲ್ಲಿ ವಿಕಾಸವೇ ಜೀವನ ಘಟನೆ ಒಂದು ಯಥಾರ್ಥ ಸ್ಥಿತಿ. ಜೀವನ ಜಾಗೃತಿಯೇ ಅನುಭವ ಯೋಗ್ಯ ಕ್ಷಮತೆ, ಯೋಗ್ಯತೆ, ಪಾತ್ರತೆಯ ಅಭಿವ್ಯಕ್ತಿ, ಸಂಪ್ರೇಷಣೆ, ಪ್ರಕಾಶನ. ಇದೇ ಕ್ರಮದಲ್ಲಿ ಮಾನವ ಅಸ್ತಿತ್ವದಲ್ಲಿ ಅವಿಭಾಜ್ಯ ವರ್ತಮಾನವಾಗಿರುವುದು ಅನುಭೂತವಾಗುತ್ತದೆ. ಅಸ್ತಿತ್ವದಲ್ಲಿ ಅವಿಭಾಜ್ಯ ಅಂಗಭೂತ ಮಾನವನಲ್ಲಿ ಜೀವನ ಜಾಗೃತಿಯ ಅಭಿವ್ಯಕ್ತಿ ಇರುವ ಸಂಭವನೀಯತೆ ನಿತ್ಯ ಸಮಯೋಚಿತವಾಗಿದೆ. ಪ್ರತ್ಯೇಕ ಮಾನವನಲ್ಲಿ, ಮಾನವನಿಂದ, ಮಾನವನಿಗಾಗಿ ಅನುಭವ ಕ್ಷಮತೆ ಸಮಾನ ರೂಪದಲ್ಲಿ ವಿದ್ಯಮಾನವಾಗಿದೆ. ಇದೇ ಸತ್ಯತೆವಶ ಅನುಭವಾಭಿವ್ಯಕ್ತಿಯ ಪುಷ್ಟಿ ಸಾರ್ವಭೌಮ ರೂಪದಲ್ಲಿ ಆಗುತ್ತದೆ. ಅಸ್ತು ಅನುಭವ ದರ್ಶನವನ್ನು ಅಭಿವ್ಯಕ್ತ ಮಾಡುತ್ತಾ ಪ್ರಾಮಾಣಿಕತೆಯ ಅನುಭವ ಮಾಡುತ್ತಿದ್ದೇನೆ. ಪ್ರಾಮಾಣಿಕರಣವೇ ಆನಂದ ಹಾಗು ಅನುಭವ ಸಹಜ ಅಭಿವ್ಯಕ್ತಿ.

ಇದೆ ಸಂಪ್ರೇಷಣೆಯಲ್ಲಿ ಸಮಾಧಾನ, ವ್ಯವಹಾರದಲ್ಲಿ ನ್ಯಾಯ ಮತ್ತು ಅದರ ನಿರಂತರತೆ. ಅನುಭವ ಜೀವನದಲ್ಲಿ ಜಾಗೃತಿಯ ದ್ಯೋತಕ. ಸಂಪೂರ್ಣ ಕ್ರಿಯೆ, ಚೈತನ್ಯ ಆಗಿರಲಿ ಅಥವಾ ಜಡ ಆಗಿರಲಿ ಸ್ಥಿತಿಯಲ್ಲಿ ಬಲ ಹಾಗು ಗತಿಯಲ್ಲಿ ಶಕ್ತಿಯ ರೂಪದಲ್ಲಿ ವರ್ತಮಾನವಾಗಿದೆ ಏಕೆಂದರೆ ಸ್ಥಿತಿಯಿಲ್ಲದೆ ಗತಿ ಸಿದ್ಧವಾಗುವುದಿಲ್ಲ. ಇದೇ ಸತ್ಯತೆಯ ಆಧಾರದ ಮೇಲೆ ಅನುಭವವೇ ಸ್ಥಿತಿಯಲ್ಲಿ ಆನಂದ ಅಂದರೆ ಪ್ರಮಾಣೀಕರಣೆ, ಅಭಿವ್ಯಕ್ತಿಯೇ ಅಂದರೆ ಗತಿಯಲ್ಲಿ ಪ್ರಮಾಣ ಮತ್ತು ಸಮಾಧಾನ.

ಅಸ್ತು! ಅಧ್ಯಯನದಿಂದ ಜೀವನ ಜಾಗೃತಿ ಹಾಗು ಅನುಭವ ಬಲದ ಅರ್ಥದಲ್ಲಿ ಈ ಅಭಿವ್ಯಕ್ತಿ ಸಹಜ-ಸುಲಭವಾಗಿದೆ. ಇದನ್ನು ಮಾನವನಿಗೆ ಅರ್ಪಿಸುತ್ತಾ ಪರಮ ಪ್ರಸನ್ನತೆಯನ್ನು ಅನುಭವಿಸುತ್ತಿದ್ದೇನೆ.

ಅಮರ್ಕಂಟಕ್,
ಚೈತ್ರ ಶುಕ್ಲ ನವಮಿ ಮಂಗಳವಾರ
ಶ್ರೀ ಸಾವಂತ್ 2061 ಅನುಸಾರ
ದಿನಾಕ್ತ 30.3.2004

ಅ. ನಾಗರಾಜ
ಪ್ರಾಣೇತ
ಮಧ್ಯಸ್ಥ ದರ್ಶನ “ಸಹ ಅಸ್ತಿತ್ವವಾದ”

ಅಧ್ಯಾಯ ೧

## ಬ್ರಹ್ಮ ಸತ್ಯ ಜಗತ್ತು ಶಾಶ್ವತ

### ಮಾನವ ದೃಷ್ಟ ಪದವಿಯಲ್ಲಿ ಜಾಗೃತಿ ಪ್ರಮಾಣ ಸಂಪನ್ನನಾಗಿರುತ್ತಾನೆ.

ಇವಾಗ ಬ್ರಹ್ಮ ಜಿಜ್ಞಾಸೆ. ಬ್ರಹ್ಮ ಶಬ್ಧದ ಅರ್ಥವನ್ನು ಸ್ಪಷ್ಟ ಮಾಡಬೇಕು.

"ನಾನು" ಅಥವಾ "ನನ್ನ", ಇದರ ಸಂದರ್ಭದಲ್ಲಿ ನಿರ್ಭ್ರಾಂತಿ ಅಥವಾ ಅಸಂದಿಗ್ದತೆಯಲ್ಲಿ, ಅಸಂದಿಗ್ದತೆಯಿಂದ, ಅಸಂದಿಗ್ದತೆಗಾಗಿ ಬ್ರಹ್ಮ ಜಿಜ್ಞಾಸೆ ಇದೆ.

ಚೈತನ್ಯ ಘಟಕದ ಮಧ್ಯಾಂಶದ ನಾಮ "ನಾನು", ಇದು ಆತ್ಮ ಎನ್ನುವ ಹೆಸರಿನಿಂದ ಗೊತ್ತುಪಡಿಸಿದೆ.

"ನಾನು" ಇದರಿಂದ ಮನ, ವೃತ್ತಿ, ಚಿತ್ತ ಮತ್ತು ಬುದ್ಧಿಯ ವಿಯೋಗ ಇಲ್ಲ. ಇವುಗಳಲ್ಲಿ ಆತ್ಮಾನುಗಾಮಿಯಾಗುವ ಯೋಗ್ಯ ಕ್ಷಮತೆಯ ಪ್ರಸ್ಥಾಪನ ಪ್ರಕ್ರಿಯೆಯೇ ಸಾಧನೆ. ಈ ನಾಲ್ಕರ ಅವಿಭಾಜ್ಯ ಸಮುಚ್ಚಯದ ನಾಮ "ಮೇರ" ಮತ್ತು ಜಾಗೃತಿ.

ಇದೇ ಜೀವನ ಜಾಗೃತಿ.

ದೇಹ - ದೇಹಕೃತ ಪರಿಣಾಮಗಳ ಯೋಗ-ವಿಯೋಗ ಪ್ರಸಿದ್ಧವಾಗಿದೆ, ಇವು ನನ್ನಿಂದ ನಿರ್ಮಿತ ಹಾಗು ಸ್ವೀಕೃತವಾಗಿವೆ.

"ಇದು" ವ್ಯಾಪಕ, ಆದರೆ ಪ್ರತ್ಯೇಕ ಕ್ರಿಯೆ ಸೀಮಿತವಾಗಿದೆ. ಇದೇ (ಬ್ರಹ್ಮ) ಸತ್ಯ.

"ಇದು" ಅಪರಿಣಾಮಿ ಹಾಗು ಅಸ್ತಿತ್ವ ಪೂರ್ಣ, ಆದರೆ ಪ್ರತ್ಯೇಕ ಕ್ರಿಯೆ ಪರಿಣಾಮದಿಂದ ಸ್ಥಿತಿಶೀಲವಾಗಿ ಇದೆ.

"ಇದು" ಶಬ್ದಗಳಿಂದ ಪೂರ್ಣ ಉದ್ಘಾಟಿತವಾಗಿ ಇಲ್ಲ. ಕೇವಲ ಶಬ್ದಗಳಿಂದ (ಬ್ರಹ್ಮದ) ನಿರೂಪಣೆ ಅಪೂರ್ಣವಾಗಿ ಇದೆ. "ಇದರ" ಅಪ್ರಚುರತೆಯದಲ್ಲಿ ಆದರೆ ಶಬ್ದದ ಅಕ್ಷಮತೆಯ ದ್ಯೋತಕ. ಶಬ್ದದ ಉತ್ಪತ್ತಿ ಹಾಗು ಸ್ಥಿತಿ ಕಂಡು ಬರುತ್ತದೆ, ಈ ಬ್ರಹ್ಮ ಕೇವಲ ಸಾಮ್ಯ ಮತ್ತು ವ್ಯಾಪಕ ಪೂರ್ಣ ಅಸ್ತಿತ್ವವೇ, ಏಕೆಂದರೆ ಬ್ರಹ್ಮ ವ್ಯಾಪಕ ವಸ್ತುವೇ, ಜೀವನದಲ್ಲಿಯೂ [ಅಂತಃಪ್ರವೇಷ್ಯ] ಪಾರಗಾಮಿಯಾಗಿದೆ, ಶರೀರದಲ್ಲಿಯೂ [ಅಂತಃಪ್ರವೇಷ್ಯ] ಪಾರಗಾಮಿಯಾಗಿದೆ. ಜೀವನಕ್ಕೆ ವ್ಯವಹಾರದಲ್ಲಿ ನ್ಯಾಯ ಮತ್ತು ಸಮಾಧಾನದ ರೂಪದಲ್ಲಿ ಪ್ರಮಾಣಿತ ಆಗಬೇಕು, ವ್ಯವಹಾರದಲ್ಲಿ ಪ್ರಮಾಣಿತ ಆಗುವ ಕ್ರಮದಲ್ಲಿ ಜ್ಞಾನ ವಿಜ್ಞಾನ ವಿವೇಕದಿಂದಲೇ ಜಾವಾಬ್ದಾರಿ ಭಾಗವಹಿಸುವಿಕೆ ಆಗುತ್ತದೆ. ಆವಾಗಲೇ ಬ್ರಹ್ಮ ನಿರೂಪಣೆ ಪೂರ ಸಂಪ್ರೆಷಿತ, ಅಭಿವ್ಯಕ್ತ ಆಗುವುದು ಕಂಡುಬರುತ್ತದೆ. ಈ ರೀತಿಯಲ್ಲಿ ಪರಮ ಸತ್ಯ ರೂಪದ ಅಸ್ತಿತ್ವ, ವ್ಯಾಪಕ ರೂಪಿ ಬ್ರಹ್ಮದಲ್ಲಿಯೇ ಪ್ರತ್ಯೇಕ ಮಾನವ ಪ್ರಯೋಗ, ವ್ಯವಹಾರ ಮತ್ತು ಅನುಭವದಿಂದ ಪ್ರಮಾಣಿತ ಮಾಡುವ ವ್ಯವಸ್ಥೆ ಇದೆ. ಮಾನವನ ಅಭಿವ್ಯಕ್ತಿಯಲ್ಲಿ ಭಾಷೆ ಒಂದು ಆಯಾಮ. ಮಾನವ ತನ್ನ ಸಂಪೂರ್ಣತೆಯ ಜೊತೆಯೇ ಪೂರ್ಣ ವಸ್ತುವನ್ನು ವ್ಯಕ್ತ ಮಾಡುತ್ತಾನೆ. ಇದೇ ಪೂರ್ಣ ಜಾಗೃತಿಯ ಪ್ರಮಾಣ.

"ನಾನು" ನಿರ್ಭ್ರಮಿತ ಅವಸ್ಥೆಯಲ್ಲಿ ಆತ್ಮ ಏಕೆಂದರೆ ಅನುಭವ ಮೂಲಕ ವಿಧಿಯಿಂದಲೇ ಜೀವನ ಜಾಗೃತಿಯ ಪ್ರಮಾಣ ಆಗುವುದು ಕಂಡುಬರುತ್ತದೆ. ಅನುಭವ ಮೂಲಕ ವಿಧಿಯಿಂದ ಬುದ್ಧಿ, ಚಿತ್ತ, ವೃತ್ತಿ ಮತ್ತು ಮನ ಅಭಿಭೂತಿ, ಅನುಗಮಿತವಾಗಿರುವುದು ಕಂಡುಬರುತ್ತದೆ. ಅಂದರೆ ಅನುಭವದ ಪ್ರತಿರೂಪ, ಅನುರೂಪದಲ್ಲಿಯೇ ಮನ, ವೃತ್ತಿ, ಚಿತ್ತ, ಬುದ್ಧಿ, ಅನುಪ್ರಾಣಿತವಾಗಿ ಇರುತ್ತದೆ. ಅನುಪ್ರಾಣಿತವಾಗಿರುವ ತಾತ್ಪರ್ಯ ಪ್ರೇರಿತ,

ಅಭಿವ್ಯಕ್ತವಾಗಿರುವುದು.ಈ ರೀತಿಯಲ್ಲಿ ನಿರ್ಭ್ರಮ ಅವಸ್ಥೆಯಲ್ಲಿ "ನಾನು" ಅಥವಾ ಆತ್ಮ ಆಗಿರುವ ಪ್ರಮಾಣ ಸ್ಪಷ್ಟವಾಗುತ್ತದೆ. ಇದನ್ನು ಪ್ರತ್ಯೇಕ ನಾರ-ನಾರಿ ಜಾಗೃತಿಯಿಂದ ಪ್ರಮಾಣಿತ ಮಾಡಬಹುದು. ಭ್ರಮಿತ ಅವಸ್ಥೆಯಲ್ಲಿ ಜೀವನದಲ್ಲಿ ನಾನು "ಅಹಂಕಾರ", ಇದು ಅಜಾಗೃತಿ ಮತ್ತು ಭ್ರಮೆಯ ದ್ಯೋತಕ. ಭ್ರಮಿತ ಬುದ್ಧಿಯೇ ಅಹಂಕಾರ. ಭ್ರಮಿತ ಬುದ್ಧಿ ತನ್ನ ತಾತ್ವಿಕ ಸ್ವರೂಪ ಅಂದರೆ ಯಥಾಸ್ಥಿತಿ ಸ್ವರೂಪದಲ್ಲಿ ಆತ್ಮ ಬೋಧ ರಹಿತವಾಗಿರುತ್ತದೆ, ಇದರ ಹೆಸರೇ ಅಹಂಕಾರ. ಇಂತಹ ಘಟನೆಯ ಕಾರಣವೇ ಶೋಧ ಮತ್ತು ಅನುಸಂಧಾನದ ಅಪೂರ್ತಿ ಇತ್ತು. ಮನಾಕಾರವನ್ನು ಸಾಕಾರ ಮಾಡಿದ ನಂತರವೂ ದುಖಿಯಾಗುವ ಕಾರಣ ಇದ್ದಂತೆಯೇ ಇತ್ತು. ಮನಃ ಸ್ವಸ್ಥತೆಯನ್ನು ಪ್ರಮಾಣಿತ ಮಾಡಲು ಮತ್ತು ಅದರ ನಿರಂತರತೆಯಲ್ಲಿ ಮಾನವ ಪರಂಪರೆಯಲ್ಲಿ ಪ್ರತ್ಯೇಕ ನರ-ನಾರಿ ಅನುಭವ ಮೂಲಕ ವಿಧಿಯಿಂದ ಆತ್ಮಬೋಧ ಸಹಿತ ಪ್ರಮಾಣಿತವಾಗುವುದು ಸಹಜ ಮತ್ತು ಆವಶ್ಯಕವಾಗಿದೆ.

ಆತ್ಮ ಬೋಧ ಮತ್ತು ಬ್ರಹ್ಮಾನುಭೂತಿಗಾಗಿ ಸಹಜ ಜಿಜ್ಞಾಸೆ ಇದೆ. ಇದು ಮಾನವ ಪರಂಪರೆಯಲ್ಲಿ ಜಾಗೃತ ಶಿಕ್ಷಣ ಸಂಸ್ಕಾರದಿಂದ ಸಮಾಧಾನಿತ ಸಾರ್ಥಕವಾಗಿರುವುದು ಕಂಡುಬರುತ್ತದೆ.

"ಇದು" ಬ್ರಹ್ಮಾನುಭೂತಿ ಸರ್ವಮಾನವ ಸಹಜ ಈಷ್ಟ, ಏಕೆಂದರೆ ಅನುಭವ ಮೂಲಕ ವಿಧಿಯಿಂದಲೇ ಪ್ರತ್ಯೇಕ ನರ - ನಾರಿ ಯಥಾರ್ಥತ, ವಾಸ್ತವಿಕತ, ಸತ್ಯತೆಯನ್ನು ಪ್ರಮಾಣಿತ ಮಾಡುತ್ತೇವೆ.

"ಇದು" ಎಲ್ಲರಿಗೂ ಯಾವಾಗಲು ಸರ್ವತ್ರ ಒಂದೇ ರೀತಿಯಲ್ಲಿ ಪ್ರಾಪ್ತವಾಗಿದೆ. ಆದರೆ ಪ್ರತ್ಯೇಕ ಇಕಾಯಿ ಇನ್ನೊಂದು ಘಟಕಕ್ಕೆ ಪ್ರಾಪ್ಯ.

ಪ್ರಾಪ್ತದ ಅನುಭೂತಿ ಮತ್ತು ಪ್ರಾಪ್ಯದ ಆಸ್ವಾದ ಹಾಗು ಸಾನಿಧ್ಯ ಪ್ರಸಿದ್ಧವಾಗಿದೆ.

ಆತ್ಮ ಬ್ರಹ್ಮಗಿಂತ ಬಿನ್ನವಾಗಿ ಇದ್ದು ಕೂಡ ಬ್ರಹ್ಮ ಗಿಂತ ಕಡಿಮೆ ಅಲ್ಲ ಏಕೆಂದರೆ ಪ್ರಕೃತಿಯ ಸರ್ವೋಚ್ಚ (ವಿಕಾಸ ಪೂರ್ಣ) ಜಾಗೃತಿಪೂರ್ಣ ಅಥವಾ ಜಾಗೃತಿಶೀಲ ಅಂಶವೇ ಆತ್ಮ

ಬ್ರಹ್ಮದಲ್ಲಿ (ವ್ಯಾಪಕ) ಆತ್ಮಾ ಚೈತನ್ಯ ಇಕಾಯಿ ಸಹಜ ಮಧ್ಯಾಂಶದ ರೂಪದಲ್ಲಿ ಇದ್ದು ಅನುಭವ ಯೋಗ್ಯ ಕ್ಷಮತೆ ನಿತ್ಯ ವರ್ತಮಾನ. ಜೀವನ ಘಟಕದ ವಿಘಟನೆ ಆಗುವುದಿಲ್ಲ. ಜೀವನ ಅಮರವಾಗಿರುತ್ತದೆ.

ವಿಕಾಸ ಭೇದದಿಂದ ಈ ಪೃಥ್ವಿಯ ಮೇಲೆ ಇರುವ ಪ್ರಕೃತಿ ನಾಲ್ಕು ಅವಸ್ಥೆಗಳಲ್ಲಿ ದೃಶ್ಯವ್ಯವಾಗಿದೆ.

ಪ್ರತ್ಯೇಕ ಇಕಾಯಿ ಧರಣಿಯ ಅಭಿನ್ನ ಅಂಗ.

ಜ್ಞಾನಾವಸ್ಥೆಯ ನಿರ್ಭ್ರಮ ಘಟಕದಲ್ಲಿ ಜೀವನದ ಅಮರತ್ವ, ಶರೀರದ ನಶ್ವರತ್ವ ಹಾಗು ವ್ಯವಹಾರದ ನಿಯಮಗಳ ಜ್ಞಾನ ಇರುತ್ತದೆ. ಅನ್ಯಥಾ ಅದು ಅದಕ್ಕಾಗಿ ಬಾಧ್ಯವಾಗಿರುತದೆ.

ಪ್ರಕೃತಿ (ಕ್ರಿಯೆ ಸಮುಚ್ಚಯ) ಹಾಗು ಬ್ರಹ್ಮ ಸಹಜ ಸಹ ಅಸ್ತಿತ್ವ ಅನಾದಿ ಕಾಲದಿಂದ ಅನಂತ ತನಕ ಇರುತ್ತದೆ.

ಪ್ರಕೃತಿ ಅನಂತ ಘಟಕಗಳ ಸಮೂಹ ಆಗಿರುತ್ತದೆ.

ಪ್ರತ್ಯೇಕ ಘಟಕದಲ್ಲಿ ವಿಕಾಸ ಹ್ರಾಸ ಅದರ ಗತಿಯಿಂದ ಉತ್ಪನ್ನ ಸಾಪೇಕ್ಷ ಶಕ್ತಿಯ ಅಂತರನಿಯೋಜನೆ ಹಾಗು ಬಹಿರ್ಗಮನ ಪ್ರಕ್ರಿಯೆಯ ಮೇಲೆ ಆಧಾರಿತವಾಗಿ ಇರುತ್ತದೆ.

ಶಕ್ತಿಯ ಅಂತರ ನಿಯೋಜನೆಯೇ ಜಾಗೃತಿ (ವಿಕಾಸ).

ಮೂಲ ಘಟಕದ ತಾತ್ಪರ್ಯ ಪರಮಾಣು ಎಂದು ಆಗಿರುತ್ತದೆ.

ವಿಕಾಸದ ಸಂದರ್ಭದಲ್ಲಿ ಘಟಕದ ತಾತ್ಪರ್ಯ ಪರಮಾಣು ಎಂದು ಆಗಿರುತ್ತದೆ.

ಬ್ರಹ್ಮಾನುಭೂತಿಯ ಯೋಗ್ಯ ಕ್ಷಮತೆ, ಯೋಗ್ಯತೆ, ಪಾತ್ರತೆಯಿಂದ ಸಂಪನ್ನವಾಗುವ ತನಕ ಮಾತ್ರ ಜಾಗೃತಿ ಮತ್ತು ಭ್ರಮೆಯ ಸಂಭವನೀಯತೆ ಇರುತ್ತದೆ.

ಬ್ರಹ್ಮಾನುಭೂತಿ ಪೂರ್ಣ ಕ್ಷಮತೆ ಯೋಗ್ಯತೆ ಮತ್ತು ಪಾತ್ರತೆಯಿಂದ ಸಂಪನ್ನವಾಗುವುದೇ ಭ್ರಮೆ ಮುಕ್ತಿ. ಚೈತನ್ಯ ಘಟಕದ ಆಸ್ವಾದ ಅಪೇಕ್ಷೆಯಿಂದ ಮುಕ್ತವಾಗುವುದು ಹಾಗು ಪ್ರೇಮಮಯತೆಯಿಂದ ಅಥವಾ ಸತ್ವದಲ್ಲಿ ಅನುಭೂತ ಆಗುವುದೇ ಮೋಕ್ಷ. ದಯ, ಕೃಪೆ, ಕರುಣೆ ಸಹಜ ಸಂಯುಕ್ತ ಪ್ರಮಾಣವೇ ಪ್ರೇಮ.

ಬ್ರಹ್ಮಾನುಭೋತಿ ಬೋಧ ಸಹಜ ಆನಂದವೇ ಐದು ಜ್ಞಾನೇಂದ್ರಿಯಗಳಲ್ಲಿ ಆಸ್ವಾದ ಸುಖವನ್ನು ಪಡೆಯುವ ಅಪೇಕ್ಷೆ ಇದೆ, ಇದನ್ನು "ಪರ ವೈರಾಗ್ಯ" ಎನ್ನುವ ನಾಮ ನೀಡಲಾಗುತ್ತದೆ.

ಅನುಭವ ಸಹಜ ಆನಂದದಲ್ಲಿ ನಿರಂತರತೆ ಬ್ರಹ್ಮಾನುಭೂತಿ ಸಹಜ ಆಧ್ಯಾಂತ ಲಕ್ಷಣ ಇರುತ್ತದೆ, ಇದು ಅಧಿಕ, ನ್ಯೂನ ಮತ್ತು ಅಭಾವದಿಂದ ಮುಕ್ತವಾಗಿರುತ್ತದೆ. ಅನುಭವ ಸಹಜ ಅಭಿವ್ಯಕ್ತಿಯೇ ಸಂಪೂರ್ಣ ಭಾವ ಸಂಪನ್ನತೆ ಮತ್ತು ಪ್ರಮಾಣ.

ಅಜಾಗೃತ ಮನಾವ ಘಟಕಗಳ ಜಾಗೃತಿಯಲ್ಲಿ ಸಹಾಯಕವಾಗಿರುವುದು ಭ್ರಮೆ ಮುಕ್ತ ಹಾಗು ಜಾಗೃತ ಮಾನವ ಘಟಕಗಳ ಸ್ವಭಾವ.

ಮೋಕ್ಷ ಪದವಿ ನಿತ್ಯ, ಅನ್ಯ ಪದವಿಗಳೇ ಅನಿತ್ಯ

ಮೋಕ್ಷ ಪದವಿಯಲ್ಲಿಯೇ ಆನಂದ ಸಹಜ ನಿರಂತರತೆ ಇದೆ.

ಆತ್ಮಾ ಸಹಜ ಅಭೀಷ್ಟವೇ "ಇದರಲ್ಲಿ" (ಬ್ರಹ್ಮದಲ್ಲಿ) ಅನುಭವ. ಆದ್ದರಿಂದ ಆತ್ಮ ತನ್ನಿಂದ ಅವಿಭಾಜ್ಯ ಬುದ್ಧಿ, ಚಿತ್ತ, ವೃತ್ತಿ ಮತ್ತು ಮನದಿಂದ ಪ್ರಭಾವಿತ ಆಗಿರುವುದಿಲ್ಲ.

ಆತ್ಮ ಮಧ್ಯಸ್ಥ ಕ್ರಿಯೆ ಹಾಗು ಬ್ರಹ್ಮ ಮಧ್ಯಸ್ಥ ಸತ್ವ.

ಸಮ-ವಿಷಮಾತ್ಮಕ ಕ್ರಿಯೆ ಹಾಗು ಶಕ್ತಿ ಇಂದ ಆತ್ಮಾ ಅಪ್ರಭಾವಿತ ಆಗುವುದಿಲ್ಲ.

ಆತ್ಮವೆ "ನಾನು" ಹಾಗು "ನನ್ನಲ್ಲಿ" ಈಷ್ಟ ಬ್ರಹ್ಮ.

ಬ್ರಹ್ಮಾನುಭೂತಿ ಸಂಪನ್ನ ಮಾನವನೇ ಜಡ ಪ್ರಕೃತಿಯ ಆಸಕ್ತಿಯಿಂದ ಮುಕ್ತನಾಗಿರುತ್ತಾನೆ, ಇವರ ಜೀವನ ಭ್ರಮೆ ಮುಕ್ತ ಅವಸ್ಥೆಯಲ್ಲಿರುತ್ತದೆ.

ಜೀವನಮುಕ್ತ ಘಟಕದಲ್ಲಿ (ಭ್ರಮೆ ಮುಕ್ತಿ) ಭೂತ, ಭವಿಷ್ಯದ ಪೀಡನೆ ಹಾಗು ವರ್ತಮಾನದ ವಿರೋಧ ಇರುವುದಿಲ್ಲ. ಇದೆ ಅನ್ಯರ ಸುಧಾರಣೆಗೆ ಹಾಗು ಜಾಗೃತಿಗೆ ಪ್ರೇರಣೆ ಸ್ರೋತ.

"ಇದರಲ್ಲಿ" ಅನುಭವವೇ ಪರಮಾನಂದ.

"ಇದರಲ್ಲಿ" ಅನುಭವದ ತೃಷ್ಣ ಪ್ರತ್ಯೇಕ ಮಾನವ ಘಟಕದಲ್ಲಿ ವಿದ್ಯಮಾನವಾಗಿದೆ.

"ಇದರಲ್ಲಿ" ಅನುಭವ ಆತ್ಮಗೆ ಹಾಗು ಬೋಧ ಬುದ್ಧಿಗೆ ಆಗುತ್ತದೆ.

“ಇದರಲ್ಲಿ” ಶೂನ್ಯ, ಜ್ಞಾನ ಹಾಗು ಸಾಮ್ಯ ಸತ್ವ ಇದೆ. ಆದ್ದರಿಂದ “ಇದು” ಸಮಸ್ತ ಕ್ರಿಯೆಯ ಆಧಾರ.

ಇದನ್ನು “ಜ್ಯೋತಿ” ಶಬ್ದದಿನದಲೋ ತಿಳಿದುಬರುತ್ತದೆ. ಬ್ರಹ್ಮಾನುಭೂತಿಯಲ್ಲಿ ಪ್ರಕಾಶದ ಅಭಾವ ಇಲ್ಲ. ಆದರೆ ಶಾಶ್ವತ ಪ್ರಕಾಶದಲ್ಲಿ ಅನುಭವ ಇದೆ. ವ್ಯಾಪಕದಲ್ಲಿ ಅನುಭವವೇ ಶಾಶ್ವತ ಪ್ರಕಾಶ ಏಕೆಂದರೆ ಸಹ ಅಸ್ತಿತ್ವ ಸ್ಪಷ್ಟ ಆಗುತ್ತದೆ.

ಆದ್ದರಿಂದ “ಇದು” ಅನುಭೂತಿ ಮೂಲಕ ಸತ್ಯಾಪನೆ ಕೇವಲ ಸಾರ್ವಭೌಮ ಲಕ್ಷ್ಯ ಮತ್ತು ಕಾರ್ಯಕ್ರಮದ ದಿಕ್ಕಿನಲ್ಲಿ ಇಂಗಿತವಾಗಿದೆ.

ಆಪ್ತತೆಯೇ ಪ್ರಮಾಣ ಸಹಿತ ಉಪದೇಶದ (ಉಪಾಯ ಸಾಹಿತ ಆದೇಶದ) ಕಾರಣ.

ಜೀವನ ಮುಕ್ತರಲ್ಲಿ (ಭ್ರಮೆಮುಕ್ತಿ ಇರುವರಲ್ಲಿ) ಆಪ್ತತೆಯೇ ಆಭಾವ ಇಲ್ಲ.

**ನಿತ್ಯಂ ಯಾತು ಶುಭೋದಯಂ**

## ಅಧ್ಯಾಯ ಎರಡು

**ಅಸಂಗ್ರಹ, ಸ್ನೇಹ, ವಿದ್ಯಾ, ಸರಳತೆ, ಅಭಯತೆಯೇ ಕ್ಲೇಶದಿಂದ ಮುಕ್ತಿ ಮತ್ತು ಹರ್ಷದ ಲಕ್ಷಣ. ಇದೇ ಸಮಾಧಾನ ಮತ್ತು ಸಮತ್ವದ ಕೂಡ ಲಕ್ಷಣ, ಇವುಗಳ ಅಸ್ತಿತ್ವದ ನಿರಂತರತೆ ಕಂಡುಬರುತ್ತದೆ.**

ಬ್ರಹ್ಮ ಜ್ಞಾನದ ಅಪ್ರಚಲಿತ, ಇದರ ಅಪ್ರಚುರತೆ ಹಾಗು ಅಪ್ರತಿಷ್ಠೆ ಅಲ್ಲ. ಇದು ಕೇವಲ ಅದರ ಯೋಗ್ಯ ಅಧಿಕಾರದ (ಕ್ಷಮತೆ, ಯೋಗ್ಯತೆ, ಪಾತ್ರತೆ) ಅಭಾವದ ಲಕ್ಷಣ.

ಅಸ್ತಿತ್ವದಲ್ಲಿರುವುದರ ಅರಿವು ಇಲ್ಲದೇ ಇರುವುದರಿಂದ ಮಾತ್ರ ಅದರಲ್ಲಿ ಅಥವಾ ಅದರ ಯಾವುದೇ ಕ್ಷತಿ ಸಿದ್ಧವಾಗುವುದಿಲ್ಲ.

ಅಸ್ತಿತ್ವದಲ್ಲಿ ಕಂಡುಬರುವ ವಸ್ತುಗಳ ಗುಣ, ಸ್ವಭಾವ, ಧರ್ಮ ಹಾಗು ಸಮುಚಿತ ವ್ಯವಹಾರದ ಅಧ್ಯಯನ ಹಾಗು ಜ್ಞಾನದಿಂದ ಮಾಡಲಾಗುವ ಅಭ್ಯಾಸದಿಂದ ಬ್ರಹ್ಮಾನುಭೂತಿ ಯೋಗ್ಯ ಕ್ಷಮತೆಯ ವಿಕಾಸ ಆಗುತ್ತದೆ.

ಬ್ರಹ್ಮವೇ ಸತ್ಯ, ಸಹ ಅಸ್ತಿತ್ವವೇ ಪರಮ ಸತ್ಯ, ಸಹ ಅಸ್ತಿತ್ವದಲ್ಲಿ ಅನುಭವವೇ ಸಮಾಧಾನ, ಸಮಾಧಾನವೆ ಸಮತ್ವ, ಸಮತ್ವವೇ ಆನಂದ, ಆನಂದವೇ ಅನುಭವ ಪ್ರಮಾಣ. ಅನುಭವವೇ ವ್ಯವಹಾರ ಮತ್ತು ಪ್ರಯೋಗ ಸಹಜ ಪ್ರಮಾಣ. ಉತ್ಪಾದನೆ ಸಮತ್ವ ನಿಯಮದಿಂದ, ವ್ಯವಹಾರ ಸಮತ್ವ ನ್ಯಾಯದಿಂದ, ವಿಚಾರ ಸಮತ್ವ ಧರ್ಮದಿಂದ (ಸಮಾಧಾನ), ಅನುಭವದ ಸಮತ್ವ ಬ್ರಹ್ಮ ಸಹಜ ವ್ಯಾಪಕತೆಯಲ್ಲಿ ಪ್ರತ್ಯಕ್ಷವಾಗಿದೆ.

ವಸ್ತು, ಕ್ರಿಯೆ, ರಚನೆಯ ಮತ್ತು ವ್ಯವಹಾರದ ಸ್ಥಿತಿ ಸರ್ವಕಾಲದಲ್ಲಿ ಪರಿಣಾಮ ಮತ್ತು ಪರಿಮಾರ್ಜನೆಯಿಂದ ವಿಕಾಸ ಹಾಗು ಜಾಗೃತಿಗಾಗಿ ವ್ಯಸ್ತವಾಗಿದೆ. ಬ್ರಹ್ಮ, ಸತ್ವ ಸಹಜ ಅಸ್ತಿತ್ವ ದೇಶ - ಕಾಲಾಬಾಧವಾಗಿದೆ. ಮಾನವ ಪರ್ಮಾರ್ಜನೆಶೀಲವಾಗಿದ್ದಾನೆ, ಅದರಲ್ಲಿಯೇ ಅಧಿಕಾರ ಹಾಗು ಅನಾಧಿಕಾರ ಯೋಗ್ಯತೆ ಮತ್ತು ಅಯೋಗ್ಯತೆ ಅಪೇಕ್ಷೆಕೃತ ಪ್ರಕ್ರಿಯೆಗಿಂತ ಅಭಿಪ್ರೇತ ಹಾಗು ಅಭಿವ್ಯಕ್ತವಾಗಿದೆ.

ಎಲ್ಲಾ ಪರಮಾಣು ಗ್ರಹ ನಕ್ಷತ್ರಾದಿ ಬ್ರಹ್ಮಾವೇಷ್ಠಿತ, ಬ್ರಹ್ಮದಲ್ಲಿ ಸಮಾಹಿತ ಹಾಗು ಸಂಪೃಕ್ತವಾಗಿದೆ.

ಪ್ರತ್ಯೇಕ ಇಕಾಯಿ ಸಂಘಟನೆಪೂರ್ಣ ಇಕಾಯಿ ಆಗಿದೆ. ಪ್ರತ್ಯೇಕ ಸಂಘಟನೆಯಲ್ಲಿ ಸಮಾಹಿತ ಪ್ರತ್ಯೇಕ ಅಂಶದ ಎಲ್ಲಾ ದಿಕ್ಕಿನಲ್ಲಿ ಬ್ರಹ್ಮ ಇದೆ. ಬ್ರಹ್ಮ ಪ್ರತ್ಯೇಕ ಇಕಾಯಿ ಮತ್ತು ಅಂಶದಲ್ಲಿ ಪಾರಗಾಮಿಯಾಗಿದೆ.

ವ್ಯಾಪಕ ಸತ್ವ ಪೂರ್ಣವಾಗಿದೆ, ಇವುಗಳ ಅನೇಕ ನಾಮಗಳಿವೆ.

ಆಕಾಶ ಮಾತು ಶೂನ್ಯವೂ ಬ್ರಹ್ಮದೇ ನಾಮಗಳು.

ಬ್ರಹ್ಮಾನುಭೂತಿ ಪರ್ಯಂತ ಯಾವುದೇ ಮಾನವ ಪರಿಮಾರ್ಜನೆಯಿಂದ ಮುಕ್ತವಾಗಿಲ್ಲ.

ಜ್ಞಾನಾವಸ್ಥೆಯ ಸಮಸ್ತ ಘಟಕಗಳ ಮೂಲ ಲಕ್ಷೆ ಕೇವಲ ಬ್ರಹ್ಮಾನುಭೂತಿ ಸಹಜ ಪ್ರಮಾಣವೇ. ಬ್ರಹ್ಮಾನುಭೂತಿಯೇ ಸಹ ಅಸ್ತಿತ್ವದಲ್ಲಿ ಅನುಭವ.

ಜೀವಿ ಮತ್ತು ಜ್ಞಾನಾವಸ್ಥೆಗಳ ಘಟಕಗಳು ಜಡ ಮತ್ತು ಚೈತನ್ಯಗಳ ಸಂಯುಕ್ತ ಅವಸ್ಥೆಯ ರೂಪದಲ್ಲಿ ಜೀವಿತ ಮತ್ತು ಪ್ರಕಟವಾಗಿವೆ.

ಜಡವೆ ವಿಕಾಸಪೂರ್ವಕ ಚೈತನ್ಯವಾಗಿದೆ. ಚೈತನ್ಯದ ತಾತ್ಪರ್ಯ ಪರಮಾಣು ಸ್ವಯಂನಲ್ಲಿ ಸಂವೇದನಶೀಲ, ಸಂಜ್ಞಾನಶೀಲವಾಗುವುದೇ.

ಜೀವಾವಸ್ಥೆಯ ಘಟಕದಲ್ಲಿ ಆಶೆಯ ಪರಿವರ್ತನೆ ಹಾಗು ಪರಿಮಾರ್ಜನೆ ಜನಾವಸ್ಥೆಯ ಘಟಕದಲ್ಲಿ ಆಶೆ ವಿಚಾರ ಇಚ್ಛೆ ಮತ್ತು ಸಂಕಲ್ಪದ ಪರಿವರ್ತನೆ ಹಾಗು ಪರಿಮಾರ್ಜನೆ ಪ್ರಸಿದ್ಧವಾಗಿದೆ.

ಪ್ರತ್ಯೇಕ ಚೈತನ್ಯ ಘಟಕ, ಚೈತನ್ಯ ಪರಮಾಣು ತನ್ನ ಕಾರ್ಯಕ್ಷೇತ್ರೇಯ ಸಹಿತ ಪುಂಜಾಕಾರದಲ್ಲಿದೆ.

ಜ್ಞಾವಸ್ಥೆಯ ಪ್ರತ್ಯೇಕ ಚೈತನ್ಯ ಘಟಕ, ಪರಮಾಣು ಸಮೂಹದಿಂದ ಮುಕ್ತ, ಆಶೆ, ವಿಚಾರ ಹಾಗು ಸಂಕಲ್ಪದಿಂದ ಯುಕ್ತವಾಗಿದೆ.  ಆದ್ದರಿಂದ ಇದು ಬಂಧನ ಹಾಗು ಮೋಕ್ಷದ ಕಾರಣ.

ಆಸ್ವಾದ ಅಪೇಕ್ಷೆ ಬಂಧನದ ದಿಕ್ಕಿನಲ್ಲಿ ಹಾಗು ಬ್ರಹ್ಮಾನುಭೂತಿ ಸಹಜ ಜಿಜ್ಞಾಸೆ ಮೋಕ್ಷದ ದಿಕ್ಕಿನಲ್ಲಿ ಇದೆ.

ಪ್ರತ್ಯೇಕ ಪರಮಾಣು ಬ್ರಹ್ಮದಲ್ಲಿ ಪೂರ್ತಿ ನೆನೆದಿದೆ, ಆದ್ದರಿಂದ ಸಂಪೂರ್ಣ ಜಡ ಚೈತನ್ಯಾತ್ಮಕ ಪ್ರಕೃತಿ ಬ್ರಹ್ಮದಲ್ಲಿ ಸಂಪೃಕ್ತ ನಿಯಂತ್ರಿತ, ಪ್ರೆರಿತ, ಕ್ರಿಯೆರತ ಹಾಗು ಸಂರಕ್ಷಿತವಾಗಿದೆ. ಇದೇ ಕಾರಣ ಮಾನವ ಅನಾವರತ ಬ್ರಹ್ಮಾನುಭೂತಿ ಯೋಗ್ಯ-ಅರ್ಹತೆಗಾಗಿ ಅಭ್ಯುದಯಶೀಲನಾಗಿದ್ದಾನೆ.

ಆತ್ಮದಲ್ಲಿ ಬ್ರಹ್ಮಾನುಭೂತಿ, ಬುದ್ಧಿಯಲ್ಲಿ ಅತ್ಮಾನುಭೂತಿ, ಚಿತ್ತದಲ್ಲಿ ಬುದ್ಧಿ ಸಹಜ ಅನುಭೂತಿ, ವೃತ್ತಿಯಲ್ಲಿ ಚಿತ್ತಾನುಭೂತಿ ಹಾಗು ಮನದಲ್ಲಿ ವೃತ್ತಿ ಸಹಜ ಅನುಭೂತಿ ಕ್ಷಮತೆ ಇರುವತನಕ ಜಾಗೃತಿಯ ಕ್ರಮ ಇದೆ.  ಇದು ಅನುಭವ ಸಮುಚ್ಚಯ, ಇದು ಸಮತ್ವ ಅಥವಾ ಸಹಜ ಸಮಾಧಿ.

ಬ್ರಹ್ಮಾ ಪ್ರಾಪ್ತಿ ಅಪ್ರಾಪ್ತಿ ಹಾಗು ಅಭಾವದ ಆರೋಪದಿಂದ ಮುಕ್ತ ಮತ್ತು ನಿತ್ಯ ವರ್ತಮಾನವಾಗಿದೆ.

ಪ್ರತ್ಯೇಕ ಮಾನವನಲ್ಲಿ ಪ್ರಾಪ್ತಿ ಅಪ್ರಾಪ್ತಿಯ ಅಪೇಕ್ಷಿಸುವ ವಿವಿಧತೆ ಪ್ರಕಟವಾಗಿರುತ್ತದೆ, ಇದು ಸಮಾಧಾನ ಅಲ್ಲ.

ಬ್ರಹ್ಮಾನುಭೂತಿಯೇ (ಸಹ ಅಸ್ತಿತ್ವಾನುಭೂತಿ) ಪೂರ್ಣ ಸಮಾಧಾನ.

ಬ್ರಹ್ಮವೇ  ಜಡ ಚೈತನ್ಯದ ಆಧಾರ. ಆಧಾರದ ತಾತ್ಪರ್ಯ ನಿತ್ಯ ಬ್ರಹ್ಮದಲ್ಲಿ ನಿರಂತರ ಅವಿಭಾಜ್ಯವಾಗಿರುವುದು.

ಇಂದ್ರಿಯಗಳಿಂದ ಸಂಪನ್ನ ಐದು ಕ್ರಿಯೆಕಲಾಪಗಳೂ ಚೈತನ್ಯದೇ. ಚೈತನ್ಯದ ಆಭಾವದಲ್ಲಿ ಇಂದ್ರಿಯ-ವ್ಯಾಪಾರ ಇಲ್ಲ.

ಜ್ಞಾನಾತ್ಮದ ಸಮಸ್ತ ಕ್ರಿಯೆಕಲಾಪದ ಉದ್ದೇಶ ಕೇವಲ ಕ್ಲೇಶಗಳಿಂದ ಮುಕ್ತಿ ಪಡೆಯುವುದು. ಸಮಸ್ಯೆಗಳೇ ಕ್ಲೇಶ.

ಜೀವಾತ್ಮದ ಕ್ರಿಯೆ ಕಲಾಪ ಕೇವಲ ವಿಶಯ ಭೋಗ ತನಕ ಮಾತ್ರ ಸೀಮಿತವಾಗಿದೆ.  ಜೀವಾವಸ್ಥೆಯ ಚೈತನ್ಯ ಇಕಾಯಿ ಜೀವಾತ್ಮ.

ಸಂಗ್ರಹ, ದ್ವೇಷ, ಅವಿದ್ಯ, ಅಭಿಮಾನ ಮತ್ತು ಭಯವೇ ಸಮಸ್ಯೆಗಳ ಪ್ರಧಾನ ಕಾರಣ. ಇವೆಲ್ಲ ಭ್ರಮೆ, ಇದರ ಅಸ್ತಿತ್ವ ಇಲ್ಲ.

ಅಸಂಗ್ರಹ, ಸ್ನೇಹ, ವಿದ್ಯೆ, ಸರಳತೆ, ಸಹಜತೆ, ಅಭಯವೇ ಕ್ಲೇಶದಿಂದ ಮುಕ್ತಿ ಮತ್ತು ಹರ್ಷದ ಲಕ್ಷಣ. ಇದೇ ಸಮಾಧಾನ ಮತ್ತು ಸಮತ್ವದ ಲಕ್ಷಣ ಕೂಡ. ಇದರ ಅಸ್ತಿತ್ವದ ನಿರಂತರತೆ ಕಂಡುಬರುತ್ತದೆ.

ತೀವ್ರ ತಾಪವಶ ಮರೀಚಿಕೆಯ, ಭೂಮಿಯ ಅಪಾರದರ್ಶಕತೆ ವಶ ಅಂಧಕಾರದ ಮತ್ತು ಹಾಗು ದೇಹಾತ್ಮಾವಾದಿ ಕಲ್ಪನೆವಶ ಮೃತ್ಯುವಿನ ಭ್ರಮೆಯಂತೆ ಭಾಸವಾಗುತ್ತದೆ ಹಾಗೆಯೇ ಭ್ರಮೆ ವಶ ಕ್ಲೇಶವಾಗುತ್ತದೆ. ದೇಹಾತ್ಮದ ತಾತ್ಪರ್ಯ ಶರೀರವನ್ನು ಜೀವನ ಎಂದು ನಂಬುವುದು. ಇದೆ ಭ್ರಮೆ.

ನಿರ್ಭ್ರಮತೆ ಯೋಗ್ಯ ಕ್ಷಮತೆಯ ಅಪೂರ್ಣತೆಯೇ ಭ್ರಮೆ. ಭ್ರಮೆಯ ನಿವಾರಣೆ ಅನುಭವ ಸಮುಚ್ಚಯದಿಂದ ಮಾತ್ರ.

ಅನುಭವ ಸಮುಚ್ಚಯ ಮಾನವೀಯತೆ ಸಹಜ ಅಧಿಕಾರದಿಂದ ಅತಿಮಾನವೀಯತೆ ಸಹಜ ಅಧಿಕಾರ ಸಂಪನ್ನತೆಯಿಂದಲೆ ಆಗುತ್ತದೆ.

ಮಾನವೀಯತೆ ಹಾಗು ಅತಿಮಾನವೀಯತೆ ಅಧಿಕಾರದ ಸ್ರೋತ ಮಾನವ ಘಟಕದಿಂದ ತನ್ನ ಶಕ್ತಿಯ ಅಂತರನಿಯೋಜನೆ (ಸ್ವ-ನಿರೀಕ್ಷಣೆ) ಪ್ರಕ್ರಿಯೆಯಿಂದಲೇ.

ಕ್ಲೇಶವೇ ದಾಸ್ಯತೆ. ಇದು ಅಜಾಗೃತಿಯ ಪ್ರತೀಕ. ಇದರಿಂದ ಮುಕ್ತಿಯೇ ಸ್ವತಂತ್ರತೆಯ ಲಕ್ಷಣ.

ದಾಸ್ಯತೆಯಿಂದ ಮುಕ್ತಿಗಾಗಿ ಆಪ್ತ ಪುರುಷರ ಯಥೋಚಿತ ಉಪದೇಶವೇ ಜೀವನದ ಕಾರ್ಯಕ್ರಮ ಹಾಗು ವ್ಯವಸ್ಥೆಯ ಪ್ರೇರಣೆ ಸ್ರೋತ.

ದಾಸ್ಯತೆ ಯಾರದೇ ಐಚ್ಛಿಕ ಪ್ರಾಪ್ತಿ ಅಥವಾ ಇಷ್ಟ ಅಲ್ಲ. ಉಪದೇಶದ ತಾತ್ಪರ್ಯ ಏನೆಂದರೆ, ಉಪಾಯದಿಂದ ಭ್ರಮೆ ಮುಕ್ತಿ ಆಗುವ ಸೂತ್ರ ಮತ್ತು ವ್ಯಾಖ್ಯೆ.

ಸ್ವ-ಕರ್ಮ ಪರಿಪಾಕ, ಸಂಸ್ಕಾರ ಅಧ್ಯಯನ ಹಾಗು ವಾತಾವರಣವೆ ಪರತಂತ್ರತೆ ಮತ್ತು ಸ್ವತಂತ್ರತೆಯ ಕಾರಣ. ಈ ಮೂರು ಕಾರಣಗಳ ವ್ಯಾಖ್ಯೆ ನಿರ್ಭ್ರಮೆ ಸ್ಥಿತಿಗಾಗಿ ನಿಯೋಜಿತವಾಗಲು ಯೋಗ್ಯ ಪ್ರಕ್ರಿಯೆಯ ವಿಶ್ಲೇಷಣೆ "ಮಾನವ ವ್ಯವ್ಹಹಾರ ದರ್ಶನ" ಇದರಲ್ಲಿ ಮಾಡಲಾಗಿದೆ.

ಭೋಗಗಳಲ್ಲಿ ಸುಖದ ಭಾಸವಾಗುತ್ತದೆ - ಇದರ ನಿರಂತರತೆ ಇಲ ಎನ್ನುವುದು ಪ್ರಸಿಧವಾಗಿದೆ.

ಜ್ಞಾನಾವಸ್ಥೆ ಸಹಜ ಪ್ರತ್ಯೇಕ ಇಕಾಯಿ ಆನಂದಾನುಭೂತಿ ಹಾಗು ಅದರ ನಿರಂತರತೆಯ ಇಚ್ಚುಕ ಆಗಿರುತ್ತಾನೆ/ಆಗಿರುತ್ತಾಳೆ. ಭಾಹುಸಂಖ್ಯದಲ್ಲಿ ಮಾನವ ವಿಷಯ ಭೋಗದಲ್ಲಿಯೇ ಇದನ್ನು ಪಡೆಯಲು ಬಯಸುತ್ತಾನೆ, ಪರಿಣಾಮತಃ ಕ್ಲೇಶ ಇರುತ್ತದೆ.

ಜ್ಞಾನಾವಸ್ಥೆಯ ಘಟಕಗಳಲ್ಲಿ ಕ್ರಿಯೆಕಲಾಪದಿಂದ ಆಸ್ವಾದ ಮತ್ತು ಅನುಭೂತಿಯೇ ಪರಿಲಕ್ಷಿತ ಆಗುತ್ತದೆ.

ಶರೀರ ಮೂಲಕ ಆಸ್ವಾದದಲ್ಲಿ ಸುಖ ಮಾತ್ರ ಭಾಸವಾಗುತ್ತದೆ, ಇದರ ನಿರಂತರತೆ ಇಲ್ಲ. ಅನುಭವಮೂಲಕ ವಿಧಿಯಿಂದ ಸುಖ, ಶಾಂತಿ, ಸಂತೋಷ, ಆನಂದದ ನಿರಂತರತೆ ಇದೆ.

ಅನುಭೂತಿ ಕೇವಲ ಬ್ರಹ್ಮದಲ್ಲಿಯೇ ಇದೆ. ಬ್ರಹ್ಮವೇ ಸತ್ಯ. ಬ್ರಹ್ಮದಲ್ಲಿ ಜೀವನ ಮತ್ತು ಜಗತ್ತು ಶಾಶ್ವತ. ನಿಯಮ, ನ್ಯಾಯ, ಧರ್ಮ, ಸತ್ಯ ಸಹಜವೇ ಅನುಭವ. ಸಂಪೂರ್ಣ ವ್ಯವಹಾರ ಹಾಗು ಕ್ರಿಯೆಯ ನಿಯಂತ್ರಣ ಸತ್ಯದಲ್ಲಿದೆ.

ಜಡ ಪ್ರಕುತಿಯ ಸತ್ಯತೆ ಸಹಜ ಜ್ಞಾನ, ಚೈತನ್ಯ ಸಹಜ ಬೋಧ ಹಾಗು ವ್ಯಾಪಕ ಸತ್ವದಲ್ಲಿ ಅನುಭವ ಸ್ವಯಮ್ಸಿದ್ಧವಾಗಿದೆ.

ಜಡ ಪ್ರಕೃತಿಯ ವಸ್ತು ಸ್ಥಿತಿ, ರಾಸಾಯನಿಕ ಪ್ರಕ್ರಿಯೆ ಹಾಗು ಭೌತಿಕ ಸಂರಚನೆಯ ಜ್ಞಾನದಿಂದ, ಜ್ಞಾನಾವಸ್ಥೆ ಸಹಜ ಜಾಗೃತ ಘಟಕಗಳು ನಿಯಂತ್ರಣದಿಂದ ಅದರ ಉಪಯೋಗ, ಸದುಪಯೋಗ ಹಾಗು ಪೋಷಣೆ ಮಾಡುತ್ತದೆ.

ಬೋಧಪೂರ್ಣ ಆಗುವುದರಿಂದ ಸ್ವ-ಮೌಲೀಕರಣೆಯಿಂದ ಮಾನವೀಯತೆಪೂರ್ಣ ಸಾಮಾಜಿಕತೆ ಪೂರ್ಣವಾಗುತ್ತದೆ. ಫಲವಾಗಿ ಮಾನವ ದೇವ ಹಾಗು ದಿವ್ಯ ಮಾನವೀಯತೆಯ ಕಡೆಗೆ ಜಿಜ್ಞಾಸೆ ಹಾಗು ಲಕ್ಷ್ಯ ಸ್ಫುರಿತವಾಗುತ್ತದೆ. ಇದರ ಪೂರ್ತಿಗಾಗಿ ಪ್ರಾಯಾಸವೂ ಪ್ರತ್ಯಕ್ಷವಾಗಿದೆ.

ಚೈತನ್ಯ ಘಟಕದಲ್ಲಿ, ಅಂದರೆ ಚೈತನ್ಯ ಪರಮಾಣುವಿನಲ್ಲಿ ಮನ, ವೃತ್ತಿ, ಚಿತ್ತ, ಬುದ್ಧಿ ಹಾಗು ಆತ್ಮ ಅವಿಭಾಜ್ಯ ವರ್ತಮಾನ ಇದರ ಅಧ್ಯಯನವಿಲ್ಲದೆ ಸತ್ಯತೆಯನ್ನು ತಿಳಿಯುವುದು ಸಂಭವನೀಯತೆ ಇಲ್ಲ.

ಮನದಲ್ಲಿ ಮೂವತ್ತು ಎರಡು ಪ್ರಕಾರದ ಆಸ್ವಾದ, ವೃತ್ತಿಯಲ್ಲಿ ಹದಿನೆಂಟು ಪ್ರಕಾರದ ತುಲನ, ಚಿತ್ತದಲ್ಲಿ ಎಂಟು ಪ್ರಕಾರದ ಚಿತ್ರಣ, ಬುದ್ಧಿಯಲ್ಲಿ ಎರಡು ಪ್ರಕಾರದ ಬೋಧ ಹಾಗು ಆತ್ಮದಲ್ಲಿ ಅನುಭವ ಕ್ರಿಯೆ ಮಾತ್ರದ ವಿಶ್ಲೇಷಣೆ ಮಾನವ ವ್ಯವಹಾರ ದರ್ಶನದಲ್ಲಿ ಮಾಡಲಾಗಿದೆ.

ಬ್ರಹ್ಮಾನುಭೂತಿಯೇ ಆನಂದ ಸಹಜ ನಿರಂತರತೆ.

ಜಾಗೃತ ಮಾನವನಲ್ಲಿ ಭೌತಿಕ ಸಮೃದ್ಧಿ ಪರಸ್ಪರ ಮಾನವೀಯತೆ ಪೂರ್ಣ ವ್ಯವಹಾರದಿಂದ ಸಮಾಧಾನ ಮತ್ತು ಅದರ ನಿರಂತರತೆ ಇದೆ. ಇದರ ಉತ್ಕಟತೆ ಅಭಿಲಾಷೆಯೂ ಪ್ರಸಿದ್ಧವಾಗಿದೆ.

ಆಸ್ವಾದ ಮತ್ತು ಅನುಭೂತಿಯ ಅವಕಾಶ ಜ್ಞಾನಾವಸ್ಥೆಯ ಘಟಕಕ್ಕೆ ಮಾತ್ರ ಪ್ರಾಪ್ತವಾಗಿದೆ.

ಪ್ರಕೃತಿಯ ಸ್ಥಿತಿ ಸಂಕೇತ ಗ್ರಹಣೆ ಮತ್ತು ವ್ಯಾಪಕತೆಯಲ್ಲಿ ಅನುಮಾನ-ಅನುಭವ ಕ್ಷಮತೆಯೇ ಜ್ಞಾನಾವಸ್ಥೆಗೆ ಪ್ರಧಾನ ಅವಸರ ಹಾಗು ಉಪಲಬ್ಧಿಯ ರೂಪದಲ್ಲಿ ಪ್ರಾಪ್ತ ಹಿರಿಮೆ ಇದೆ.

ಜ್ಞಾನಾತ್ಮವೇ ವಂಚಿತ ಪರಿಮಾರ್ಜನೆಯಿಂದ ದೇವ ಹಾಗು ದಿವ್ಯಾತ್ಮ ಪದವಿಯನ್ನು ಪಡೆಯುತ್ತದೆ, ಜೀವಾತ್ಮ ಅಲ್ಲ.

ದಿವ್ಯಾತ್ಮ ಪದವೆ ಮೋಕ್ಷ ಪದ. ಇದೇ ಜಾಗೃತಿ ಸಹಜ ಚರಮೋತ್ಕರ್ಷ.

ದಯ-ಕೃಪೆ-ಕರುಣೆಯೇ ದಿವ್ಯಾತ್ಮದ ಸ್ವಭಾವ, ಬ್ರಹ್ಮಾನುಭೂತಿ ಪ್ರವೃತ್ತಿ ಹಾಗು ದೃಷ್ಟಿ ಕೇವಲ ಸತ್ಯವೇ.

ಶರೀರದ ವ್ಯಾಮೋಹದ ಸೀಮೆಯ ತನಕ ಜ್ಞಾನಾತ್ಮವೂ, ಜೀವಾತ್ಮದ ಸದೃಶ ದುಖ, ಶೋಕಾದಿ ಕಾರ್ಪಣ್ಯ ದೋಷದಿಂದ (ಕ್ಲೇಶ ಪರಿಪಾಕಾತ್ಮಕ ಪ್ರವೃತ್ತಿ) ಪೀಡಿತ ಭ್ರಮಿತನಾಗಿದ್ದು, ಇದು ಕೇವಲ ನ್ಯಾನ, ಧರ್ಮ, ಸತ್ಯಾನುಭೂತಿ ಯೋಗ್ಯ ಕ್ಷಮತೆಯ ಅಭಾವವೇ.

ಆತ್ಮ ಸ್ವಭಾವದಿಂದ ಅನುಭವ-ನಿರತ, ಬುದ್ಧಿ ವಿಶೇಷಜ್ಞ, ಚಿತ್ತ ಚಿತ್ರಣ ತಜ್ಞ, ವೃತ್ತಿ ವಿಚಾರ ತಜ್ಞ,  ಹಾಗು ಮನ ಸ್ವಭಾವದಿಂದ ರಸಜ್ಞ. ಇವುಗಳೆಲ್ಲ ಜಾಗೃತಿಯ ಅನಂತರವೇ ಅನುಭೂತಿಯಿಂದ ಸಂಪನ್ನವಾಗುತ್ತವೆ.

ಮಾನವನ ಸ್ಥೂಲ ರೂಪವನ್ನು ಇಚ್ಛಾನುಸಾರ ಸಂಚಾಲಿತ ಮಾಡುವ ಚೈತನ್ಯ ಪುಂಜ ಜ್ಞಾನಾತ್ಮ ಮತ್ತು ಜೀವಿ ಶರೀರವನ್ನು ಸಂಚಾಲಿತ ಮಾಡುವ ಪುಂಜ ಜೀವಾತ್ಮ.

ಅನುಭೂತಿ ತನಕ ಜಾಗೃತಿಗಾಗಿ ಪ್ರಯಾಸದ ಅಭಾವ ಇಲ್ಲ. ಜೊತೆಗೆ ಜಡ ಪ್ರಕೃತಿ ಪರಿಣಾಮ ಹಾಗು ಚೈತನ್ಯ ಪ್ರಕೃತಿ ಪರಿಮಾರ್ಜನೆ ಪ್ರಕ್ರಿಯೆಯಿಂದ ಮುಕ್ತವಾಗಿಲ್ಲ.

ಭೌತಿಕ ವಸ್ತುವಿನಲ್ಲಿ ಗುಣ, ರಚನೆಯಲ್ಲಿ ಪರಿಣಾಮ ಹಾಗು ಪರಿವರ್ತನೆ ಹಾಗು ಚೈತನ್ಯದಲ್ಲಿ ಆಸೆ, ವಿಚಾರ, ಇಚ್ಛೆಯಲ್ಲಿ ಪರಿಮಾರ್ಜನೆ ಪ್ರತ್ಯಕ್ಷವಾಗಿದೆ.

ಜಡ ಪಕ್ಷದಲ್ಲಿ ಪರಿಣಾಮ ಮತ್ತು ಪರಿವರ್ತನೆ, ಚೈತನ್ಯ ಪಕ್ಷದಲ್ಲಿ ಗುಣಾತ್ಮಕ ಪರಿವರ್ತನೆ ಮತ್ತು ಪರಿಮಾರ್ಜನೆ ಕ್ರಿಯೆ ಕಂಡುಬರುತ್ತದೆ.

ವಸ್ತು ಪದಾರ್ಥ, ಗುಣ ಸಾಪೇಕ್ಷ ಶಕ್ತಿ ಸಂರಚನೆ ಆಕಾರ-ಪ್ರಕಾರದ ಪರಿಣಾಮ-ಪರಿವರ್ತನೆಯ ಕಾರಣ ವಿಕಾಸ ಕ್ರಮವೇ. ವಿಕಾಸ ಕ್ರಮ ವಿಕಾಸ, ಜಾಗೃತಿ ಕ್ರಮ, ಜಾಗೃತಿ ನಿತ್ಯ ವರ್ತಮಾನ.

ವಸ್ತುವಿನ ಗುಣ ಮತ್ತು ಸಂರಚನೆಯಲ್ಲಿ ಪರಿಣಾಮ ಹಾಗು ಪರಿವರ್ತನೆಯ ಕಾರಣ ಅವುಗಳ ಅಸ್ಥಾಯಿತ್ವತೆ ಮತ್ತು ಅಪೂರ್ಣತೆ.

ಪದಾರ್ಥ ತತ್ವತಃ ಪರಮಾಣುವಿನ ಸ್ವಭಾವ ಗತಿಯ ರೂಪದಲ್ಲಿ ಪ್ರಾಪ್ತವಾಗಿದೆ.

ಪರಮಾಣುಗಳ ಅನೇಕ ಪ್ರಜಾತಿಗಳು ಪ್ರಾಪ್ತವಾಗಿವೆ, ಇವುಗಳನ್ನು ಭೌತಿಕ ಶಾಸ್ತ್ರವೂ ಸಿದ್ಧ ಮಾಡಿದ್ದಾರೆ.

ಚೈತನ್ಯ ಪರಮಾಣುಗಳಲ್ಲಿ ಸಂಘಟನಾತ್ಮಕ ಜಾತಿಗಳು ಕಂಡುಬರುವುದಿಲ್ಲ. ಆದ್ದರಿಂದ ಅವುಗಳಲ್ಲಿ ಸಂಘಟನೆಯ ಸೀಮೆಯಲ್ಲಿ ವಿವಿಧತೆ ಇಲ್ಲ.

ಜ್ಞಾನಾವಸ್ಥೆಯ ಘಟಕಗಳು ನಿರ್ಭ್ರಾಂತ, ಭ್ರಾಂತಾಭ್ರಾಂತ ಹಾಗು ನಿರ್ಭ್ರಾಂತ ಭೇದಗಳಲ್ಲಿ ಗಣ್ಯವಾಗಿದೆ.

ಭ್ರಾಂತ ಘಟಕಗಳು ನಾಲ್ಕು ವಿಷಯಗಳ ಭೋಗಕ್ಕಾಗಿ, ಭ್ರಾಂತಾಭ್ರಾಂತ ಘಟಕಗಳು ಮೂರು ಏಷಣೆಗಳ ಯೋಗಕ್ಕಾಗಿ ಪ್ರಯಾಸದಲ್ಲಿ ತೊಡಗಿದ್ದು, ನಿರ್ಭ್ರಾಂತ ಘಟಕಗಳು ಬ್ರಹ್ಮಾನುಭೂತಿಯಲ್ಲಿ ತೃಪ್ತವಾಗಿದೆ.

ಚೈತನ್ಯ ಪರಮಾಣುವಿನಲ್ಲಿ ಸಂಘಟನೆಯ ಪರಿವರ್ತನೆ ಇಲ್ಲ. ಜಡ ಪರಮಾಣುಗಳಲ್ಲಿಯೇ ಸಂಘಟನೆ - ಗುಣ ಹಾಗು ರಚನೆಯ ಪರಿವರ್ತನೆ ಆಗುವುದು ಕಂಡುಬರುತ್ತದೆ.

ಪ್ರಸ್ಥಾಪನೆ ವಿಸ್ಥಾಪನೆಯಿಂದ (ಸ್ಥಾನ ಪಲ್ಲಟ) ಮುಕ್ತವಾಗುವುದಕ್ಕಾಗಿ, ಪರಮಾಣುವಿನಲ್ಲಿ ಎಷ್ಟು ಅಂಶಗಳನ್ನು ಒಳಗೊಳ್ಳುವ ಸಂಭವನೀಯತೆ ಇದೆಯೋ ಅಷ್ಟು ಅಂಶಗಳ ಸಂಘಟನೆ ಆದ ನಂತರ ಚೈತನ್ಯ ಆಗುವುದು ಮತ್ತು ಆ ಎಲ್ಲಾ ಅಂಶಗಳ ಅಲ್ಪ ಅರ್ಧ ಮತ್ತು ಪೂರ್ಣ ಅಭಿವ್ಯಕ್ತಿ ಸಹಜ ಕ್ರಿಯೆಶೀಲತೆಯಿಂದಲೇ, ಪರಿಮಾರ್ಜಿತ ಆಗುವುದು ಕಂಡುಬರುತ್ತದೆ.

ಚೈತನ್ಯ ಅವಸ್ಥೆಯ ಘಟಕಗಳಲ್ಲಿ ಸಂಘಟನೆ ಪೂರ್ಣತೆ ಸಂಪನ್ನವಾಗಿದೆ, ಇದರ ಕಾರಣ ಮಾನವ ಜೀವನದಲ್ಲಿ ಮೂವತ್ತು ಎರಡು ಪ್ರಕಾರದ ಆಸ್ವಾದ, ಹದಿನೆಂಟು ಪ್ರಕಾರದ ತುಲನೆ, ಎಂಟು ಪ್ರಕಾರದ ಚಿತ್ರಣ, ಎರಡು ಪ್ರಕಾರದ ಬೋಧ ಕ್ರಿಯೆಗಳು ಮತ್ತು ಆತ್ಮದಲ್ಲಿ ಮಾತ್ರ ಅನುಭೂತಿ ಸಿದ್ಧವಾಗಿದೆ.

ಅಂತರಯಾಮಿ ನಾಮದಿಂದ ಪಾರಗಾಮಿಯತೆ ಮತ್ತು ವ್ಯಾಪಕತೆ ಸಹಜ ಮಹಿಮೆ ಇಂಗಿತವಾಗಿದೆ.

ಅಂತರಯಾಮಿಯಲ್ಲಿ ಅನುಭೂತಿಯಿಂದ ಅಭಿಮಾನ ಸಮಾಪ್ತವಾಗುತ್ತದೆ. ಅಭಿಮಾನ ಭ್ರಮೆಯ ಅಂಶ.

ಅಂತರಯಾಮಿಯ ಬೋಧದಿಂದ ಮಾತ್ರ ಪ್ರಪಂಚವನ್ನು ಒಂದು ಪರಿವಾರದ ರೂಪದಲ್ಲಿ ಆತ್ಮೀಯತೆಯಿಂದ (ಅನನ್ಯತೆಯಿಂದ) ಸ್ವೀಕರಿಸುತ್ತದೆ. ಇದೇ ಸರ್ವ ಶುಭದ ಸೂತ್ರ.

ಆತ್ಮೀಯತೆಯೇ ಪರಸ್ಪರ ಅಪರಾಧ ಹಾಗು ಅಪವ್ಯಯದ ನಿರ್ಧಾರಕ ಹಾಗು ನಿಯಾಮಕ. ಜೊತೆಗೆ ನ್ಯಾಯ ಧರ್ಮ ಸತ್ಯದ ಅನುಸರಣಕ್ಕಾಗಿ ಪ್ರೇರಣೆ ಪ್ರದಾಯಿನಿ.

ಪರಸ್ಪರತೆಯಲ್ಲಿ ಅಪರಾಧ ಮತ್ತು ಅಪವ್ಯಯದ ಅಭಾವವೇ ಸಹ ಅಸ್ತಿತ್ವ ಸಹಜ ಸಾಮರಸ್ಯತೆ.

ಜಾಗೃತ ಮಾನವ ವ್ಯವಹಾರ ಕಾಲದಲ್ಲಿ ಸಹ ಅಸ್ತಿತ್ವದಲ್ಲಿ ಪ್ರಮಾಣೀಕರಿಸುತ್ತಾನೆ.

ಆತ್ಮಬೋಧದ ಅಭಾವದಲ್ಲಿ ಅಂತರಯಾಮಿತ್ವದ ಅನುಭವ ಜ್ಞಾನ ಆಗುವುದು ಸಧ್ಯ ಇಲ್ಲ. ಸತ್ವದಲ್ಲಿ ಸಂಪುಕ್ತತೆಯ ಬೋಧವೇ ಅಂತರಯಾಮಿ ಸಹಜ ಬೋಧ.

ಆತ್ಮ ನಿರಂತರ ಮಧ್ಯಸ್ಥ ಕ್ರಿಯೆ. ಅದು ಅಧಿಕ ಹಾಗು ಕಡಿಮೆಯಿಂದ ಮುಕ್ತವಾಗಿದೆ, ಆವೇಶದಿಂದ ರಹಿತವಾಗಿದೆ, ಶೋಕ, ಮೋಹ, ಭ್ರಮೆಯಿಂದ ಮುಕ್ತವಾಗಿದೆ. ಆದ್ದರಿಂದ ಆತ್ಮದಿಂದ ಪ್ರಭಾವಿತ ಬುದ್ಧಿ, ಬುದ್ಧಿಯಿಂದ ಪ್ರಭಾವಿತ ಚಿತ್ತ, ಚಿತ್ತದಿಂದ ಪ್ರಭಾವಿತ ವೃತ್ತಿ, ವೃತ್ತಿಯಿಂದ ಪ್ರಭಾವಿತ ಮನವೇ ವ್ಯವಸಾಯ ವ್ಯವಸ್ಥೆ ಮತ್ತು ವ್ಯವಹಾರದ ನಿಯಂತ್ರಣ ಮಾಡುತ್ತಾನೆ. ಅನ್ಯಥಾ ವ್ಯವಹಾರ ಮತ್ತು ಉತ್ಪಾದನೆ ಕೃತ್ರಿಮ ವಾತಾವರಣೆಯಿಂದಲೇ ನಿಯಂತ್ರಿತವಾಗಿರುವುದು ಕಂಡುಬರುತ್ತದೆ.  ದಾಸತೆ, ಮತ್ತವರನ್ನು ದಾಸ ಮಾಡುವ ಪ್ರಯಾಸ ಮಾಡುತ್ತಾನೆ. ಯಾರು ಯಾವುದರಲ್ಲಿ ಇರತ್ತಾರೋ ಅದನ್ನೇ ವಿತರಿಸುತ್ತಾನೆ. ದಾಸತ್ವ ಮೂರು ರೀತಿಯಲ್ಲಿ ಪರಿಲಕ್ಷಿತವಾಗುತ್ತದೆ -

೧. ವ್ಯವ್ವಹಾರ ದಾಸತ್ವ

೨. ಕರ್ಮ ದಾಸತ್ವ

೩. ವಿಚಾರ ದಾಸತ್ವ

ದಾಸತ್ವ ಕ್ರಮವಾಗಿ ನ್ಯಾಯ, ಸಮಾಧಾನ ಮತ್ತು ಅನುಭೂತಿ ಯೋಗ್ಯ ಕ್ಷಮತೆ ಸಂಪನ್ನತೆಯಿಂದ ಸಮಾಪ್ತವಾಗುತ್ತದೆ.

ಆತ್ಮ ಮಧ್ಯಸ್ಥ ಕ್ರಿಯೆ ಪ್ರತಿಷ್ಠೆಯಿಂದ ಪ್ರತಿಷ್ಠಿತವಾಗಿದೆ. ಮಧ್ಯಸ್ಥತೆಯೇ ಸಮಾಧಾನ, ಸಮಾಧಾನವೇ  ನ್ಯಾಯ, ನ್ಯಾಯವೇ ಮಧ್ಯಸ್ಥತೆ ಅಥವಾ ಸಮತ್ವ. ಅನುಭೂತಿ ಯೋಗ್ಯ ಅವಸರ ಮಾನವನಿಗೆ ಪ್ರಾಪ್ತವಾಗಿದೆ ಆದ್ದರಿಂದ ನಿತ್ಯ ಪ್ರಯಾಸೋದಯವಾಗಿದೆ.

ಆತ್ಮ, ಚೈತನ್ಯ ಘಟಕದ ಸಂಘಟನೆಯ ಮಧ್ಯದಲ್ಲಿ ಸ್ಥಿತವಾಗಿರುವುದು ಕಂಡುಬರುತ್ತದೆ. ಅತಃ ಅದು ಮಧ್ಯಸ್ಥ ಕ್ರಿಯೆ. ಅನ್ಯ ನಾಲ್ಕು ಸ್ತರಗಳ ಅಂಶಗಳು ಅಂತರಾಂತರ ಪರಿವೇಶಗಳಲ್ಲಿ ಆತ್ಮದ ಎಲ್ಲಾ ದಿಕ್ಕಿನಲ್ಲಿ ಭ್ರಮಣಶೀಲವಾಗಿವೆ, ಆದ್ದರಿಂದ ಸಮ ಮತ್ತು ವಿಷಮ ಕ್ರಿಯೆಗಳಾಗಿವೆ.

ಇಕಾಯಿ ಸಹಜ ನಿಯಂತ್ರಣ ಮಧ್ಯಸ್ಥತೆಯಲ್ಲಿಯೇ ಇದೆ.

ಜಡ ಕ್ರಿಯೆಯ ನಿಯಂತ್ರಣ ನಿಯಮದಲ್ಲಿ, ಸಾಮಾಜಿಕತೆಯ ನಿಯಂತ್ರಣ ನ್ಯಾಯದಲ್ಲಿ, ಆಶೆ ವಿಚಾರ ಇಚ್ಛೆಯ ನಿಯಂತ್ರಣ ಸಮಾಧಾನದಿಂದ, ಅನುಭವದ ನಿಯಂತ್ರಣ ಬ್ರಹ್ಮಾನುಭೂತಿಯಲ್ಲಿಯೇ ಇದೆ.

ಅನಂತ ಕ್ರಿಯೆ ಸಮೂಹವೇ ಪ್ರಕೃತಿ ಹಾಗು ವಿರಾಟ. ಪ್ರತ್ಯೇಕ ಕ್ರಿಯೆ ವಿರಾಟದ ಒಂದು ಅಂಶ. ಪ್ರತ್ಯೇಕ ಪರಮಾಣುವೂ ಒಂದು ಸೂಕ್ಷ್ಮ ವಿರಾಟ.

ಲಕ್ಷಣ ಲಕ್ಷ್ಯದಿಂದಲೇ ನಿಯಮ, ನ್ಯಾಯ, ಸಮಾಧಾನ ಹಾಗು ಅನುಭವದಿಂದಲೇ ದರ್ಶನ.

ನಿಯಮದಲಿ ಅಪರಿಣಾಮ-ಅಪರಿವರ್ತನೆ-ಅಪರಿಪಾಕ; ನ್ಯಾಯದಲ್ಲಿ ಅಸಂದಿಗ್ಧತೆ ಹಾಗು ಅಭಯತೆ; ಧರ್ಮದಲ್ಲಿ ನಿರ್ವಿಶಮತೆ ಮತ್ತು ಸಹ ಅಸ್ತಿತ್ವ; ಸಮಾಧಾನದಲ್ಲಿ ಸ್ವರ್ಗೀಯತೆ ಮತ್ತು ಸಮೃದ್ಧಿ ಮತ್ತು ಅನುಭವದಲ್ಲಿ ಆನಂದ ಮತ್ತು ಪ್ರಮಾಣಿಕತೆ ಸಹಜ ನಿರಂತರತೆಯಿದೆ, ಇದಕ್ಕಾಗಿಯೇ ಮಾನವ ತ್ರುಷಿತನಾಗಿದ್ದಾನೆ.

ನಿಯಮ, ನ್ಯಾಯ, ಧರ್ಮ, ಶಬ್ದಗಳೂ ಬ್ರಹ್ಮಾನುಭೂತಿ ಸಹಜ ಅರ್ಥವನ್ನು ಇಂಗಿತ ಮಾಡುತ್ತವೆ. ಇವುಗಳಲ್ಲೆಲ್ಲ ಸಹ ಅಸ್ತಿತ್ವವೇ ಇಂಗಿತವಾಗಿದೆ. ಜಾಗೃತ ಮಾನವನಲ್ಲಿ ಸ್ವತಂತ್ರತೆಯೇ ಸಮಾಧಾನ, ಸಮಾಧಾನವೇ ಸಮತ್ವ, ಸಮತ್ವವೇ ಸಹಜ ಸಮಾಧಿ, ಸಹಜ ಸಮಾಧಿಯೇ ಆನಂದ, ಆನಂದವೇ ಜೀವನ ಜಾಗೃತಿ, ಜಾಗೃತಿಯೇ ಸ್ವತಂತ್ರತೆ.

ಸ್ವತಂತ್ರತೆ ಸಹಜ ಕಾಮನೆ ಪ್ರತ್ಯೇಕ ಮಾನವನಲ್ಲಿ ವಿದ್ಯಮಾನವಾಗಿದೆ.

ಜಡ ಪ್ರಕೃತಿಯ ಜೊತೆ ನಿಯಮದಿಂದ ಉತ್ಪಾದನೆ, ಸಮಾಜದಲ್ಲಿ ನ್ಯಾಯದಿಂದ ವ್ಯವಹಾರ, ಸ್ವಯಂನಲ್ಲಿ ಸಮಾಧಾನ ಪೂರ್ಣ ವಿಚಾರ ಹಾಗು ಸತ್ಯದಲ್ಲಿ ಅನುಭವ ಪೂರ್ಣ ಕ್ಷಮತೆಯಿಂದ ಸಂಪನ್ನವಾಗುವುದೇ ಮಾನವ ಇಕಾಯಿ ಸಹಜ ಪರಮ ಜಾಗೃತಿ. ಇದೇ ಸ್ವತಂತ್ರತೆಯ ಆದಿ ಅಂತ ಲಕ್ಷ್ಯ ಹಾಗು ಸ್ವಾನುಶಾಸನೆಯ ಸ್ವರೂಪ.

ಸ್ವತಂತ್ರ ಮಾನವ ಇಕಾಯಿ ಜಾಗೃತಿ ಸಹಜ ಪ್ರಮಾಣ ಹಾಗು ಅನ್ಯ ಅವರ ಅನುಸರಣ ಮಾಡುವುದರಲ್ಲಿ ಅಥವಾ ಪೂರ್ಣ ಜಾಗೃತಿಯ ನಿಕಟ ಇರುತ್ತದೆ.

ಜಾಗೃತಿ ಪೂರ್ಣ ಮಾನವ ಇಕಾಯಿ ಅನ್ಯರ ಅಭ್ಯುದಯಕ್ಕಾಗಿ ಸಹಾಯಕವಾಗಿರುತ್ತಾನೆ.

ಸ್ವತಂತ್ರ ಮಾನವ ಘಟಕಗಳ ಸಂಖ್ಯೆ ವೃದ್ಧಿಗಾಗಿ ಮಾನವೀಯತೆ ಸಹಜ ವ್ಯವಹಾರ ಉತ್ಪಾದನೆ ಹಾಗು ವ್ಯವಸ್ಥೆಯ ಅಧ್ಯಯನ ಮತ್ತು ಆಚರಣದ ಏಕಸೂತ್ರತೆ ಆವಶ್ಯಕ.

ಮಾನವ ಇಕಾಯಿ ವಿಕಾಸದಿಂದಲೇ (ಜಾಗೃತಿಯಿಂದಲೇ) ಅನುಭವ ತಜ್ಞ ಸಿದ್ಧವಾಗಿದೆ.  ಜಡ ಅವಸ್ಥೆಯಿಂದ ವಿಕಾಸದಿಂದ ಚೈತನ್ಯ ಅವಸ್ಥೆ ಪ್ರಾಪ್ತವಾಗುತ್ತದೆ. ಈ ಚೈತನ್ಯ ಘಟಕಗಾಲೆ ಜೀವಿ ಹಾಗು ಜ್ಞಾನಾವಸ್ಥೆ ಪ್ರಬೇಧಗಳಿಂದ ಗಣ್ಯವಾಗಿದೆ.

ಮಾನವಾಕಾರ ಶರೀರವನ್ನು ಜ್ಞಾನಾತ್ಮ ತನ್ನ ಆಶೆ ವಿಚಾರ ಇಚ್ಛೆ ಅನುಸಾರ ಸಂಚಾಲಿತ ಮಾಡುತ್ತಾನೆ. ಜೀವಾತ್ಮ ಮಾನವೇತ್ತರ ಪಶು ಪಕ್ಷಿ ಇತ್ಯಾದಿ ಜೀವಿ ಶರೀರಗಳನ್ನು ಆಶಾನುರೂಪ ಸಂಚಾಲಿತ ಮಾಡುತ್ತದೆ. ಜ್ಞಾನಾತ್ಮವೇ ಜಾಗೃತಿಯಿಂದ ಜಾಗೃತ ಮಾನವಾತ್ಮ, ದೇವಾತ್ಮ ಅಥವಾ ದಿವ್ಯಾತ್ಮದಲ್ಲಿ ಗಣ್ಯವಾಗಿದೆ. ಕ್ರಮವಾಗಿ ಇವರಿಗೆ, ಮಾನವ, ದೇವ ಮಾನವ , ದಿವ್ಯ ಮಾನವ ನಾಮ ಇದೆ.

ದಿವ್ಯ ಮಾನವ, ದೇವ ಮಾನವ ಮತ್ತು ಮಾನವೀಯತೆಪೂರ್ಣ ಮಾನವ ಬ್ರಹ್ಮಾನುಭೂತಿ (ಸಹ ಅಸ್ತಿತ್ವಾನುಭೂತಿ) ಸಮಪನ್ನವಾಗಿದ್ದು, ಅಮಾನವನಲ್ಲಿಯೂ ಬ್ರಹ್ಮ ಭಾಸವಾಗುತ್ತದೆ. ಆದ್ದರಿಂದ ಯಾರಿಗೆ ನಾಲ್ಕು ವಿಷಯಗಳಲ್ಲಿ ಭೋಗ, ಅತಿಭೋಗ, ಮಾಡುತ್ತಾ ಸುಖ ಭಾಸವಾಗುತ್ತದೆಯೋ, ಅದರ ನಿರಂತರತೆ ಆಗದೆ ಇರುವುದೇ ಅಮಾನವನಲ್ಲಿ ಜಾಗೃತಿ ಸಹಜ ಅಪೇಕ್ಷೆ.

ಆನಂದ ಸಹಜ ನಿರಂತರತೆಯ ಆಶೆ, ಆಕಾಂಕ್ಷೆ ಮತ್ತು ಜಿಜ್ಞಾಸೆ ಮಾನವನಲ್ಲಿ ಕಂಡುಬರುತ್ತದೆ. ಜಾಗೃತಿಯಿಂದ ಬ್ರಹ್ಮಾನುಭೂತಿಗಾಗಿ ಮಾನವ ಪ್ರಯಾಸ ನಿರತನಾಗಿದ್ದಾನೆ.

ಕ್ರಿಯೆ ಹಾಗು ಬ್ರಹ್ಮದಲ್ಲಿ ಲಕ್ಷಣ ಭೇದವಿದೆ.

ಕ್ರಿಯೆ ಅನಂತ ಸಂಖ್ಯೆಯಲ್ಲಿ ಅವಸ್ಥೆಗಳ ಸಹಿತ ಸ್ಥೂಲ, ಸೂಕ್ಷ್ಮ, ಕಾರಣ ಭೇದಗಳಿಂದ ಪ್ರತ್ಯಕ್ಷವಾಗಿದೆ. ಬ್ರಹ್ಮ ಅಖಂಡ, ಪೂರ್ಣ ಮತ್ತು ವ್ಯಾಪಕವಾಗಿದೆ.

ಜಡ ಕ್ರಿಯೆಯ ಪರಿಣಾಮ, ಪರಿವರ್ತನೆ, ಪರಿಪಾಕ ಪ್ರತ್ಯಕ್ಷವಾಗಿದೆ.

ಚೈತನ್ಯ ಕ್ರಿಯೆಯಲ್ಲಿ ಆಶೆ, ವಿಚಾರ, ಇಚ್ಛೆ ಮತ್ತು ಸಂಕಲ್ಪದ ಸಕ್ರಿಯತೆ ಮತ್ತು ಅದರ ಪರಿಮಾರ್ಜನೆ, ವಿಕಲ್ಪವೂ ಪ್ರಸಿದ್ಧವಾಗಿದೆ. ಸತ್ಯಾನುಭವ ಯೋಗ್ಯ ಕ್ಷಮತೆ, ಯೋಗ್ಯತೆ, ಪಾತ್ರತೆಯಿಂದ ಪರಿಪೂರ್ಣ ಆಗುವ ತನಕ ಸ್ವೀಕೃತಿ ರೂಪದ ಪರಿಪಾಕ, ಪರಿಮಾರ್ಜನೆ ಮತ್ತು ಜಾಗೃತಿ ಸಹಜ ವಿಕಲ್ಪದ ಶೃಂಖಲೆ ಇರುತ್ತದೆ, ಇದು ಪೂರ್ಣತೆ ಮತ್ತು ಸ್ವತಂತ್ರತೆಗಾಗಿ ಮಾರ್ಗವಾಗಿದೆ.

ಸತ್ಯಾನುಭವ ಆತ್ಮದಲ್ಲಿ ಅನುಭವ, ಬೋಧ ಬುದ್ಧಿಯಲ್ಲಿ, ಅನುಭವ ಬೋಧ ಸಹಜ ಪ್ರತೀತಿ ಚಿತ್ತದಲ್ಲಿ, ಅನುಭವ ಸಹಜ ಚಿಂತನದ ಆಭಾಸ ವೃತ್ತಿಯಲ್ಲಿ ಹಾಗು ಭಾಸ ಮನದಲ್ಲಿ ಆಗುತ್ತದೆ.

ಅಧ್ಯಯನ ಕ್ರಮದಲ್ಲಿ ಅನುಭವ ಕ್ಷಮತೆಯಾ ಆಂಶಿಕದಲ್ಲಿ ಬೋಧ, ಬೋಧದ ಆಂಶಿಕದಲ್ಲಿ ಪ್ರತೀತಿ, ಪ್ರತೀತಿಯ ಆಂಶಿಕದಲ್ಲಿ ಆಭಾಸ ಹಾಗು ಆಭಾಸದ ಆಂಶಿಕದಲ್ಲಿ ಭಾಸ ಕ್ಷಮತೆ ಪ್ರಸಿದ್ಧವಾಗಿದೆ, ಇದು ಸಾಕ್ಷದಲ್ಲಿ ಪ್ರತ್ಯಕ್ಷವಾಗುವ ಸಂಜ್ಞಾನೀಯ ಕ್ರಿಯೆಗಳು. ಇದೇ ಜ್ಞಾನಾವಸ್ಥೆ ಸಹಜ ಮಹಿಮೆ.

ಐದು ಸಂವೇದನೆ ಕ್ರಿಯೆಗಳಿಂದ  ಆಸ್ವಾದ ಮತ್ತು ಸ್ವಾಗತ ಕ್ರಿಯೆಯ ಅಭಿವ್ಯಕ್ತಿ ಆಗುತ್ತದೆ. ಸ್ವಾಗತ ಭಾವ ಪಕ್ಷದ ಬೋಧದಿಂದ ಅನುಭವವೂ ಆಗುತ್ತದೆ.

ಸ್ವಾಗತ ಹಾಗು ಆಸ್ವಾದ ಕ್ರಿಯೆ ಮಾನವನಲ್ಲಿ ಪ್ರಸಿದ್ಧವಾಗಿದೆ.

ಸ್ವಾಗತ ಭಾವದಲ್ಲಿ ಅನುಭವಕ್ಕಾಗಿ, ಆಸ್ವಾದ ಭಾವದಲ್ಲಿ ಭೋಗಗಳಿಗೆ ಅನುಮಾನಾಂಕುರ ಇದೆ.

ಭೋಗ ಕೇವಲ ಆಸ್ವಾದದಿಂದ ಜಡ ಪಕ್ಷದಲ್ಲಿ, ಪಕ್ಷದಿಂದ, ಪಕ್ಷಕ್ಕಾಗಿ ಇರುವುದು. ಅನುಭವಾಕಾಂಕ್ಷೆ ಇರುವ ಸ್ವಾಗತ ಭಾವ ಸತ್ಯದಲ್ಲಿಯೇ ಇರುತ್ತದೆ.

ಲೋಕ ಸತ್ಯ, ವಸ್ತು ಸ್ಥಿತಿ ಸತ್ಯ, ವಸ್ತುಗತ (ವಸ್ತುನಿಷ್ಠ ?) ಸತ್ಯದ ರೂಪದಲ್ಲಿ ಹಾಗು ವ್ಯಾಪಕ ಸ್ಥಿತಿಪೂರ್ಣ ಪ್ರಸಿದ್ಧವಾಗಿದೆ. ಈ ಪ್ರಮಾಣ ಸಿದ್ಧವಾಗಿದೆ. ದರ್ಶನ ಕ್ಷಮತೆಯ ಅಪೂರ್ಣತೆಯ ಸ್ಥಿತಿಯಲ್ಲಿ ಅನುಮಾನ, ಅಧ್ಯಯನ ಮತ್ತು ಅನುಭವಕ್ಕಾಗಿ ಪ್ರಯಾಸದ ಉದಯ ಆಗುತ್ತದೆ.

ಲಕ್ಷಣ ಹಾಗು ಲಕ್ಷ್ಯದ ಯೋಗಫಲದಲ್ಲಿ ಅನುಮಾನದ ಉದಯವಾಗುತ್ತದೆ. ವಿಜ್ಞಾನ ಹಾಗು ವಿವೇಕ - ಜ್ಞಾನವೇ ಪ್ರಮಾಣ, ಇದು ಅನುಭವ ಸಮಾಧಾನ ವ್ಯವಹಾರ ಮತ್ತು ಪ್ರಯೋಗವೇ.

ವಸ್ತು ಸ್ಥಿತಿ ಸಾಮಯಿಕ ಸತ್ಯ.

ಕಾಲ - ಕ್ರಿಯೆ - ಪರಿಣಾಮದಿಂದ ಮುಕ್ತ ನಿತ್ಯ ಸತ್ಯ ಬ್ರಹ್ಮವೇ.

ಸಂವೇದನೆಗಳ ಆಸ್ವಾದದ ಅಪೇಕ್ಷೆಯಲ್ಲಿ ಸ್ವಾಗತ ಭಾವದ ಅಧಿಕವಾಗುವುದೇ ಜಾಗೃತಿಯ ದಿಕ್ಕಿನಲ್ಲಿ ಗತಿ. ಇದರ ವಿಪರೀತ ಭಾಗಗಳಲ್ಲಿರುವ ಪ್ರವೃತ್ತಿ ಅಜಾಗೃತಿ ಹಾಗು ಹ್ರಾಸದ ಲಕ್ಷಣ.

ಆತ್ಮ (ಕಾರಣ) ಮಧ್ಯಸ್ಥ ಕ್ರಿಯೆಯಾಗಿದೆ. ಅತಿತ್ವ ಹಾಗು ಆನಂದವೆ ಅದರ ಅದ್ಯಾಂತ ಲಕ್ಷಣ.

ಜ್ಞಾನಾವಸ್ಥೆಯಲ್ಲಿ ಮಾನವೀಯತೆಪೂರ್ಣ ಮಾನವನೇ  ಉತ್ಪಾದನೆಶೀಲ, ವ್ಯವಹಾರಶೀಲ, ವಿಚಾರಶೀಲ ಹಾಗು ಅನುಭವಶೀಲ ಘಟಕ.

ಮಾನವನಲ್ಲಿ ಕಾರ್ಯ-ವ್ಯವಹಾರ ಕಾಲ, ವಿಚಾರ ಕಾಲ ಹಾಗು ಅನುಭವ ಕಾಲ ಪ್ರಸಿದ್ಧವಾಗಿದೆ. ಉತ್ಪಾದನೆ, ವ್ಯವಹಾರ ಹಾಗು ವಿಚಾರದ ಉಪಯುಕ್ತತೆ ಅನುಭವದ ಆಶೆ ಹಾಗು ಆಕಾಂಕ್ಷೆಯಲ್ಲಿಯೇ ಇದೆ.

ಬ್ರಹ್ಮಗಿಂತ ಅತಿರಿಕ್ತ ಬೇರೆ ಯಾವ ಸತ್ವವೂ ಇಲ್ಲ.

ಮಾನವ ತನಗಿಂತ ಕಡಿಮೆ ವಿಕಸಿತರ ಜೊತೆ ಉತ್ಪಾದನೆ, ಸಮಾನರ ಜೊತೆ ವ್ಯವಹಾರ, ಅಧಿಕ ಶ್ರೇಷ್ಠರ ಸಾನಿಧ್ಯ ಮತ್ತು ವ್ಯಾಪಕತೆಯಲ್ಲಿ ಅನುಭವ ಮಾಡುತ್ತಾನೆ, ಮಾಡಲು ಬಯಸುತ್ತಾನೆ ಅಥವಾ ಮಾಡಲು ಬಾಧ್ಯನಾಗಿದ್ದಾನೆ.

**"ನಿತ್ಯಂ ಯಾತು ಶುಭೋದಯಂ"**

## ಅಧ್ಯಾಯ ೩

### ಶ್ರಮೆಯ ಕ್ಷೋಭವೇ ವಿಶ್ರಾಮದ ತೃಷೆ. ಬ್ರಹ್ಮಾನುಭೂತಿಯೇ ಪೂರ್ಣ ವಿಶ್ರಾಮ

### ಪ್ರತ್ಯೇಕ ಕರ್ಮದ ಸ್ಫುರಣದ ಮೂಲದಲ್ಲಿ ಸಂಸ್ಕಾರ ಇದೆ; ಪ್ರತ್ಯೇಕ ಕರ್ಮ ಸಂಸ್ಕಾರದಾಯಿಯಾಗಿದೆ.

ಕ್ರಿಯೆ ಸಮೂಹವೇ ವಿರಾಟವಾಗಿದೆ.

ಘಟಕಗಳು ವಿಕಾಸದ ಅಂತರಾಂತರ ವೈವಿಧ್ಯತೆಯಿಂದ ರಹಿತವಾಗಿಲ್ಲ.

ಅಸಂಖ್ಯ ವಿವಿಧತೆಯ ಸಮೂಹವೇ ವಿರಾಟ.

ವಿರಾಟವೇ ಪ್ರಕೃತಿ.

ಬ್ರಹ್ಮ ವ್ಯಾಪಕ ಹಾಗು ಸ್ಥಿರವಾಗಿದೆ. ಅತಃ ಅದರಲ್ಲಿ ಯಾವುದೇ ತರಂಗ, ಕಂಪನ, ಸ್ಪಂದನ ಮತ್ತು ಗತಿ ಇಲ್ಲ.

"ಇದು" ಪಾರಗಾಮಿ (ವ್ಯಾಪಿಸುವ). "ಇದು" ಅಪರಿಣಾಮಿ (ಪರಿಣಾಮವಿಲ್ಲದ).

ಇದು ಆಕಾರ - ಪ್ರಕಾರಾತ್ಮಕ ಸೀಮೆಯಿಂದ ಬಾಧಿತವಾಗಿಲ್ಲ. ಅತಃ ಇದರಲ್ಲಿ ಯಾವುದೇ ಸಂಕಲ್ಪ ವಿಕಲ್ಪ ಇಲ್ಲ.

ಸತ್ವದಲ್ಲಿ ಒಳಗೊಂಡಿರುವ ಅನಂತ ಕ್ರಿಯೆಗಳು ಗತಿಶೀಲ, ಸ್ಪಂದನ ಶೀಲ, ಕಂಪನ ಶೀಲ ಮತ್ತು ತರಂಗಿತ ಕಂಡುಬರುತ್ತದೆ, ಇದರ ಫಲಸ್ವರೂಪ ಪರಿಣಾಮ-ಪರಿಪಾಕ-ದ್ವಾರಾ ಪ್ರಕೃತಿ ನಾಲ್ಕು ಅವಸ್ಥೆಗಳಲ್ಲಿ ಪ್ರಕಟವಾಗಿದೆ.

ಪ್ರತ್ಯೇಕ ಕ್ರಿಯೆ ಸೀಮಿತ ಸತ್ವದಲ್ಲಿ ಸಂಪೃಕ್ತವಾಗಿದೆ. ಈ ನಿರ್ಣಯ ಜ್ಞಾನಾವಸ್ಥೆ ಸಹಜ ಘಟಕಗಳಲ್ಲಿ ಸಹಜವಾಗಿದೆ.

ಬ್ರಹ್ಮ ಸಂಕಲ್ಪ ವಿಕಲ್ಪಾದಿ ಕ್ರಿಯೆ ಅಲ್ಲ.

ಬ್ರಹ್ಮ ಕ್ರಿಯೆಯಾಗಿರುವುದರ ಬಗೆ ವರ್ತಮಾನದಲ್ಲಿ ಯಾವುದೇ ಪುಷ್ಟಿ ಅಥವಾ ಪ್ರಮಾಣ ಇಲ್ಲ. ಇದು ವ್ಯಾಪಕ ರೂಪದಲ್ಲಿರುವುದರ ಪುಷ್ಟಿ ಪ್ರಮಾಣ ಉಪಲಬ್ಧವಾಗಿದೆ.

ಅನುಭವ ವರ್ತಮಾನದಲ್ಲಿಯೇ ಪ್ರತಿಷ್ಠಿತವಾಗಿದೆ. ಭೂತ ಹಾಗು ಭವಿಷ್ಯ ಕೇವಲ ಅನುಮಾನದಲ್ಲಿಯೇ ಇದೆ. ಅನುಮಾನ ಸಾಧಾರ ಹಾಗು ನಿರಾಧಾರ ಭೇದಗಳಲ್ಲಿ ಗಣ್ಯವಾಗಿದೆ. ಇದು ಸ್ಪಷ್ಟತೆ ಹಾಗು ಅಸ್ಪಷ್ಟತೆಯನ್ನು ಪ್ರಕಟಿಸುತ್ತದೆ.

ನಿಯಮ-ಪ್ರಕ್ರಿಯೆ-ಲಕ್ಷಣ ಸಹಿತ ಸ-ಆಧಾರ ಅನುಮಾನ ಅನ್ಯಥಾ ನಿರಾಧಾರ ಅನುಮಾನ ಇದೆ.

ಪ್ರಾಪ್ತದ ಅನುಭೂತಿ ಮತ್ತು ಪ್ರಾಪ್ಯದ ಉಪಲಬ್ಧಿ ಪ್ರಸಿದ್ಧವಾಗಿದೆ.

ಪ್ರತ್ಯೇಕ ಇಕಾಯಿ ವಿರಾಟದ ಒಂದು ಅಂಶ ಆದ್ದರಿಂದ ಅದು ವಿರಾಟದ ಸಂಕೇತವನ್ನು ಗ್ರಹಿಸುವುದಕ್ಕಾಗಿ ಸಂಭವನೀಯವಾಗಿದೆ.

ಪ್ರಕೃತಿ ನಿರ್ಮಾಣದ ಪ್ರಾರಂಭದ ಕ್ರಮ ಹಾಗು ಭ್ರಮೆಯ ಅಸ್ತಿತ್ವದ  ಪ್ರಾರಂಭದ ಕಾಲದ ಸಂಬಂಧದಲ್ಲಿ ಯಾವ ಪ್ರಮಾಣವೂ ಇಲ್ಲ. ವರ್ತಮಾನದಲ್ಲಿ ಸತ್ವ ಹಾಗು ಸತ್ವದಲ್ಲಿ ಒಳಗೊಂಡಿರುವ ಪ್ರಕೃತಿಯೇ ಪ್ರತ್ಯಕ್ಷವಾಗಿದೆ. ಪ್ರಕೃತಿ ಮತ್ತು ಸತ್ವದ ಆದಿ ಹಾಗು ಅಂತದ ಚರ್ಚೆ ವಿಗತ ಹಾಗು ಆಗ್ತಾದಲ್ಲಿ ಇದೆ, ಇದರ ಅಂತರಾಳದ ಯಾವ ಪ್ರಮಾಣವೂ ಇಲ್ಲ. ಗಣನ ಋಣ, ಧನ, ಅನಂತದ ಸ್ಥಿತಿಯಲ್ಲಿ ಪ್ರಸ್ತುತವಾಗಿದೆ.

ನಿರಾಧಾರ ಅನುಮಾನ, ಪ್ರತ್ಯಕ್ಷ ಅಥವಾ ಸಾಧಾರ (ಯೋಜನಾಬದ್ಧ ಅನುಮಾನ) ಅಲ್ಲ. ಇದು ಪ್ರಸಿದ್ಧವಾಗಿದೆ.

ಆಕಾರ - ಆಯತನ -ಧನೋಪಾದಿ ಯುಕ್ತ ಅನಂತ ಲೋಕಗಳ ಆಧಾರವೂ ಬ್ರಹ್ಮವೇ.

ಸೂತ್ರ - ಛಂದಸ್ಸು - ವಾಕ್ಯ - ಶಬ್ದದ ಮೂಲಕ ಕ್ರಿಯೆಯ ವರ್ಣನೆ ಮಾತ್ರ ಇದೆ.  ಜೊತೆಗೆ, ಜ್ಞಾನಾನುಭೂತಿಗಾಗಿ ಉಪದೇಶದ ಮೂಲಕ ಇಂಗಿತವಾಗಿದೆ.

ಬ್ರಹ್ಮ ಸಹಜ ವರ್ಣನೆ ಅಂತರ್ವ್ಯಾಪಿ ವ್ಯಾಪಕ ಮತ್ತು ಪಾರದರ್ಶಿಯತೆಯ ರೂಪದಲ್ಲಿದೆ. “ಇದು” ಕೇವಲ ಭಾಸ, ಆಭಾಸ, ಬೋಧ ಹಾಗು ಅನುಭವಗಮ್ಯವಾಗಿದೆ (ಆಗಬಹುದು). ಇದರ ಬೋಧ ಮಾನವನ ಕ್ಷಮತೆ, ಯೋಗ್ಯತೆ ಪಾತ್ರತೆಯ ಮೇಲೆ ಆಧಾರಿತವಾಗಿದೆ.

ಪ್ರತ್ಯೇಕ ಘಟಕದ ಆಧಾರ ಬ್ರಹ್ಮವೇ. ಎಲ್ಲಾ ಘಟಕಗಳಿಗೂ ಮೂಲ ಪ್ರೇರಣೆ “ಇದರಿಂದಲೇ” ಪ್ರಾಪ್ತವಾಗುತ್ತದೆ.

ಪ್ರಕೃತಿ ಸತ್ವದಲ್ಲಿ ಸಂಪುಕ್ತವಾಗಿದೆ.

ಬ್ರಹ್ಮದಲ್ಲಿ ಪ್ರೇರಣೆ ಪಡೆಯುವುದು-ನೀಡುವುದಕ್ಕಾಗಿ ಸಂಕಲ್ಪ ವಿಕಲ್ಪಾದಿಯ ಪುಷ್ಟಿ ಇಲ್ಲ.

ನಿಯಂತ್ರಣವೇ ಪ್ರೇರಣೆ. ವ್ಯಾಪಕದಲ್ಲಿ ಪ್ರಕೃತಿ ನಿಯಂತ್ರಿತವಾಗಿದೆ.

ಸಂಪುಕ್ತವಾಗಿರುವುದೇ ನಿಯಂತ್ರಣೆ, ನಿಯಂತ್ರಣವೇ ಪ್ರೇರಣೆ, ಹಾಗು ಪ್ರೇರಣೆಯೇ ಜ್ಞಾನ.

ಬ್ರಹ್ಮದಲ್ಲಿ ಜ್ಞಾನಾವಸ್ಥೆಯ ಜಾಗೃತಿಯಲ್ಲಿ, ಜಾಗೃತಿಯಿಂದ, ಜಾಗೃತಿಗಾಗಿ ಗತಿ ಇದೆ. ಜ್ಞಾನವೇ ಬ್ರಹ್ಮ, ಬ್ರಹ್ಮವೇ ವ್ಯಾಪಕ, ವ್ಯಾಪಕದಲ್ಲಿ ಪ್ರತ್ಯೇಕ ಇಕಾಯಿ ನಿಯಂತ್ರಿತ, ನಿಯಂತ್ರಣವೇ ಪ್ರೇರಣೆ, ಪ್ರೇರಣವೇ ನಿಯಮ-ನ್ಯಾಯ-ಧರ್ಮ-ಸತ್ಯ, ನಿಯಮ-ನ್ಯಾಯ-ಧರ್ಮ-ಸತ್ಯವೇ ಪ್ರೇಮ, ಪ್ರೇಮವೇ ಅನುಭೂತಿ, ಅನುಭೂತಿಯೇ ಜಾಗೃತ ಜೀವನ, ಜಾಗೃತ ಜೀವನವೇ ಆನಂದ, ಆನಂದವೇ ಬ್ರಹ್ಮಾನುಭೂತಿ ಮತ್ತು ಬ್ರಹ್ಮವೇ ಜ್ಞಾನ.

ಲಕ್ಷ್ಯದ ದಿಕ್ಕಿನಲ್ಲಿ ತ್ವರಣ-ಕ್ರಿಯೆಯೇ ಪ್ರೇರಣೆ ಮತ್ತು ಜ್ಞಾನ.

ಪ್ರಕೃತಿ ಮೂಲವಾಗಿ ಬ್ರಹ್ಮದಲ್ಲಿ ನಿಯಂತ್ರಿತ ಹಾಗು ಪ್ರೇರಿತವಾಗಿದೆ. ಅದು ಯಾವಾಗಲೂ ನಾಲ್ಕು ಅವಸ್ಥೆಯಲ್ಲಿ ಅಭ್ಯುದಯಶೀಲವಾಗಿರುತ್ತದೆ.

ಮಾನವ ಲಕ್ಷ್ಯ ಅನುಭೂತಿಯೇ ಮಾತ್ರ. ವಿರಾಟದಲ್ಲಿ ಸ್ಥಿತ ಜಡ ಪ್ರಕೃತಿಯ ಉಪಯೋಗ ಜೀವಾವಸ್ಥೆ ಹಾಗು ಜ್ಞಾನಾವಸ್ಥೆಯ ಘಟಕಗಳು ಅವರ್ನಿಶಿಯಾಗಿ ಮಾಡುತ್ತಾ ಬರುತ್ತಿವೆ. ಮಾನವನಿಗೆ ಆನಂದ ಸಹಜ ನಿರಂತರತೆ ಪದವಿ ಮುಕ್ತಿಯ ಅತಿರಿಕ್ತ ಇಲ್ಲ. ಇದೇ ದಿವ್ಯ ಮಾನವ ಪದವಿ.

ಜಾಗೃತಿಯಿಂದ ಪ್ರತ್ಯೇಕ ಕ್ರಿಯೆಯ ಪ್ರೇರಣೆಯಲ್ಲಿ ಅನುಭವಗಿಂತ ಅಧಿಕ ಅನುಮಾನ ಇದೆ.

ಜಡ ಪ್ರಕೃತಿಯ ಆಸ್ವಾದದಿಂದ ಆನಂದದ ನಿರಂತರತೆ ಇಲ್ಲ.

ಶ್ರಮೆಯ ಕ್ಷೋಭವೇ ವಿಶ್ರಾಮದ ತೃಷೆ. ಬ್ರಹ್ಮಾನುಭೂತಿಯೇ ಪೂರ್ಣ ವಿಶ್ರಾಮ. ಪೂರ್ಣ ವಿಶ್ರಾಮವೇ ಸರ್ವತೋಮುಖಿ ಸಮಾಧಾನದ ಪ್ರಮಾಣ.

ಕ್ರಿಯೆಯ ವಸ್ತು ಸ್ಥಿತಿಯ ದರ್ಶನ ಮಾತ್ರ ಆಗುವುದು ಮತ್ತು ಸತ್ಯದಲ್ಲಿ ಅನುಭವವಾಗುವುದು ಪ್ರಸಿದ್ಧವಾಗಿದೆ.

ಬ್ರಹ್ಮ ನಿತ್ಯ - ಸತ್ಯ -ವ್ಯಾಪಕ - ಅಖಂಡ - ಜ್ಞಾನ ಹಾಗು ಶಾಶ್ವತವಾಗಿದೆ. ಇದು ಸ್ಥೂಲ ಸೂಕ್ಷ್ಮ ಕಾರಣ ಕ್ರಿಯೆ ಮತ್ತು ಪರಿಣಾಮದಿಂದ ರಹಿತ, ದೇಶ, ಕಾಲಾತೀತ, ಆನಂದ ಸ್ವರೂಪ ಮತ್ತು ಪೂರ್ಣವಾಗಿದೆ.

ಶಬ್ದ ಹಾಗು ಅದರ ಗತಿಯೂ ಬ್ರಹ್ಮದಲ್ಲಿ ಒಳಗೊಂಡಿದೆ. ಬ್ರಹ್ಮ ಶಬ್ದದಿಂದ ಶೂನ್ಯವೂ ಇಂಗಿತವಾಗಿದೆ. ಪ್ರಕೃತಿಯ ಪೂರ್ಣ ವಿವೇಚನೆಯ ನಂತರವೂ ಬ್ರಹ್ಮದ ಸದೃಶ್ಯ ಬೇರೆ ಯಾವದೂ ಇಲ್ಲ ಮತ್ತು ಅದರ ಸಂದರ್ಭದಲ್ಲಿ ಬೇರೆ ಯಾವ ಅನುಭವವೂ ಇಲ್ಲ. ಪ್ರಕೃತಿಯ ಅದರ ಪೃಥಕ ಅಸ್ತಿತ್ವ ಇಲ್ಲ.

ಕ್ರಿಯೆ ಮತ್ತು ಘಟಕಗಳ ಸಾನಿಧ್ಯ ಹಾಗು ಸಹವಾಸ ಪ್ರಸಿದ್ಧವಾಗಿದೆ. ಅದು ವಿರೋಧ ಅಥವಾ ನಿರ್ವಿರೋಧದಿಂದ ಸ್ವಾಗತ ಹಾಗು ಆಸ್ವಾದ ಭಾವ ಸಹಿತ ಆಶೆ, ಆಕಾಂಕ್ಷೆ ಹಾಗು ಇಚ್ಛೆಯ ರೂಪದಲ್ಲಿ ಮಾನವನಲ್ಲಿ ಪ್ರತ್ಯಕ್ಷವಾಗಿದೆ.

ಬ್ರಹ್ಮವೇ ಪರಮಾತ್ಮ ಇದೇ ಪೂರ್ಣ ಸತ್ವ.

ಆತ್ಮ ನಿತ್ಯ ಅಭೀಷ್ಟ ಆಗಿರುವ ಕಾರಣ ಇದರ ನಾಮ ಪರಮಾತ್ಮ.

ಘಟಕಗಳು ಪರಿಮಿತ, ಪರಮಾತ್ಮ ಆಪರಿಮಿತ ಆಗಿದೆ.

ಪ್ರತ್ಯೇಕ ಜ್ಞಾನಾತ್ಮ ತನ್ನ ಅಭಿನ್ನ ಅಂಗಗಳ ಸಹಿತ ಒಂದು ಮಾನವ ಶರೀರವನ್ನು ಚಲಿಸತ್ತಾ ಮಾನವೀಯತೆ ಹಾಗು ಅತಿಮಾನವೀಯತೆಯಿಂದ ಪರಿಪೂರ್ಣವಾಗುವುದಕ್ಕಾಗಿ ಪ್ರಯಾಸ ನಿರತವಾಗಿದೆ. ಫಲವಾಗಿ ಪರಮಾತ್ಮಾನುಭವ ಮಾಡುತ್ತದೆ.

ಜ್ಞಾನಾತ್ಮ ಮಾನವೀಯತೆ ಹಾಗು ಅದಕ್ಕಿಂತ ಅಧಿಕ ಜಾಗೃತಿಯ (ವಿಕಸಿತ) ಸೀಮಾವರ್ತಿ ಸ್ವಭಾವ ಹಾಗು ಕರ್ಮಗಳಲ್ಲಿ ವ್ಯವಹಾರ ನಿರತ ಹಾಗು ಆಕಾಂಕ್ಷಿಯಾಗಿರುತ್ತಾರೆ. ಇದಕ್ಕಿಂತ ವಿಪರೀತ ಅಮಾನವೀಯತೆಯ ಸ್ವಭಾವ - ದೃಷ್ಟಿಯಿಂದ ವಿಷಯೋಪಭೋಗದಲ್ಲಿಯೂ ನಿರತವಾಗಿರುವುದು ಕಂಡುಬರುತ್ತದೆ.

ಅಮಾನವೀಯತೆಯ ಲಕ್ಷಣ ಮಾನವೇತ್ತರ ಜೀವಿಗಳಲ್ಲಿ ಆಂಶಿಕ ರೂಪದಲ್ಲಿ ವಿದ್ಯಮಾನವಾಗಿದೆ.

ಮಾನವ ಅಮಾನವೀಯತೆಯಿಂದ ಭೋಗ, ದೃಷ್ಟಿ ಹಾಗು ಸ್ವಭಾವದಿಂದ ಹ್ರಾಸದ ದಿಕ್ಕಿನಲ್ಲಿ ಅಗ್ರಸ್ಥಾನ ಆಗುತ್ತಾನೆ.

ಪ್ರತ್ಯೇಕ ಜ್ಞಾನಾತ್ಮ ಶರೀರವನ್ನು ತ್ಯಜಿಸುವ ಸಮಯ ಸುಖ ಅಥವಾ ದುಃಖ, ಸುರೂಪ ಅಥವಾ ಕುರೂಪದ ಪ್ರಭಾವದಿಂದ ಪೂರ್ಣತಃ ಪ್ರಭಾವಿತನಾಗುತ್ತಾನೆ. ಇದು ಸ್ವಪ್ರಭಾವೀಕರಣೆ. ಇದೇ ಜನ್ಮ ಪರಿಪಾಕ ಪ್ರಕ್ರಿಯೆ.

ಸ್ವಪ್ರಭಾವೀಕರಣ ಪ್ರಕ್ರಿಯೆಯ ಬೋಧ ಮನ, ವೃತ್ತಿ, ಚಿತ್ತ, ಬುದ್ಧಿ, ಸಹಜ ಶಕ್ತಿಗಳ ಅಂತರನಿಯೋಜನೆ ಪ್ರಕ್ರಿಯೆಯಿಂದ ಸ್ಪಷ್ಟವಾಗುತ್ತದೆ.

ಮಾನವ ಮತ್ತವರ ದೇಹ ತ್ಯಾಗ ಕ್ರಿಯೆಯನ್ನು ಅವಲೋಕಿಸುತ್ತಾನೆ. ಆ ಸಮಯ ಅಲ್ಲಿ ಕಂಡುಬರುವ ಲಕ್ಷಣಗಳಿಂದ ಸ್ವಪ್ರಭಾವೀಕರಣೆ ಪ್ರಕ್ರಿಯೆಯ ಪುಷ್ಟಿ ಆಗುತ್ತದೆ. ಇದೇ ಜನ್ಮ ಪರಿಪಾಕ ಪ್ರಕ್ರಿಯೆ.

ಸಂಸ್ಕಾರಗಳ ಪ್ರಭಾವದ ಪ್ರತ್ಯಕ್ಷ ರೂಪ ಮನ, ವೃತ್ತಿ, ಚಿತ್ತ ಮತ್ತು ಬುದ್ಧಿಯ ಸಕ್ರಿಯೇಶೀಲತೆ, ಇದು "ತಾ-ತ್ರಯದಲ್ಲಿ" ವ್ಯಕ್ತವಾಗುತ್ತದೆ.

ಪ್ರತ್ಯೇಕ ಕರ್ಮದ ಸ್ಫುರಣದ ಮೂಲದಲ್ಲಿ ಸಂಸ್ಕಾರ ಇದೆ. ಪ್ರತ್ಯೇಕ ಕರ್ಮ ಸಂಸ್ಕಾರದಾಯಿಯಾಗಿರುತ್ತದೆ. ಕ್ರಿಯೆಯ ಪ್ರತಿಕ್ರಿಯೆ ಹಾಗು ಪರಿಪಾಕ ಪ್ರಸಿದ್ಧವಾಗಿದೆ.

ಆಸ್ವಾದ ಹಾಗು ಚಯನ ಕ್ರಿಯೆಯ ಪ್ರಭಾವ ಮನದ ಮೇಲೆ, ವಿಶ್ಲೇಷಣೆ ಮತ್ತು ತುಲನ ಕ್ರಿಯೆಯ ಪ್ರಭಾವ ವೃತ್ತಿಯ ಮೇಲೆ, ಚಿತ್ರಣ ಹಾಗು ಚಿಂತನ ಕ್ರಿಯೆಯ ಪ್ರಭಾವ ಚಿತ್ತ ಮೇಲೆ, ಸಂಕಲ್ಪ ಹಾಗು ಬೋಧ, ಇದರ ಪ್ರಭಾವ ಬುದ್ಧಿಯ ಮೇಲೆ ಆಗುತ್ತದೆ.

ಸತ್ಯ ಬೋಧ ಯೋಗ್ಯ ಸಂಸ್ಕಾರಗಳಿಂದ ಸಮೃದ್ಧ ಆಗುವ ತನಕ ಬುದ್ಧಿಯೇ ಅಹಂಕಾರದ ರೂಪದಲ್ಲಿರುತ್ತದೆ.

ಅಹಂಕಾರವೇ ಭ್ರಮೆ ಹಾಗು ಅಜ್ಞಾನದ ಕಾರಣ.

ಆತ್ಮದ ಸಂಕೇತ ಗ್ರಹಿಸುವುದರಲ್ಲಿ ಬುದ್ಧಿಯ ಅಕ್ಷಮತೆಯೇ ಅಹಂಕಾರ.

ಗುಣಾತ್ಮಕ ಸಂಸ್ಕಾರಗಳಿಂದಲೇ ಅಹಂಕಾರದಿಂದ ಮುಕ್ತಿ ಪಡೆಯಬಹುದು. ಜೊತೆಗೆ ಇದರಿಂದ ಅಭಿಮಾನ ರಹಿತ ಸಂಕಲ್ಪೋದಯ ಆಗುತ್ತದೆ.

ಭ್ರಮೆಯಿಂದ ಮುಕ್ತನಾಗಲು ಸತ್ಯಾಸತ್ಯದ ವಿಶ್ಲೇಷಣೆಗಳಿಂದ ಪ್ರಾಪ್ತ ನಿಷ್ಕರ್ಷಗಳ ದೃಡ ಸಂಕಲ್ಪದಲ್ಲಿ ಪರಿಣಿತ ಆಗುವ ದೃಷ್ಟಿಯಿಂದ ಪ್ರತಿಬದ್ಧತೆಯ ಅನಿವಾರ್ಯತೆ ಇದೆ.

ಸಿದ್ಧಾಂತ ಹಾಗು ಪ್ರಕ್ರಿಯೆಯಿಂದ ಸತ್ಯತೆಯ ಉದ್ಘಾಟನೆಯೇ ಶೋಧ.

ಸುಪ್ರವೃತ್ತಿಗಳು ಹಾಗು ಸಂಸ್ಕಾರಗಳಿಗಾಗಿ ಮಾನವೀಯ ಪರಿವಾರ ಹಾಗು ಸಮಾಜ ಪರಂಪರೆಗಾಗಿ ಅಧ್ಯಯನದಿಂದ ಪ್ರಾಪ್ತ ವಸ್ತು ಬೋಧ ಹಾಗು ಪರಿವೇಶ ಗತ ಪ್ರೇರಣೆಗಳು ಸಹಾಯಕ ತಥ್ಯವಾಗಿದೆ.

ಕೃತಜ್ಞತೆ, ಅಸ್ತೇಯ, ಅಪರಿಗ್ರಹ, ಸತ್ಯ ಭಾಷಣೆ, ಸ್ವನಾರಿ-ಸ್ವಪುರುಷ ಗಮನ, ಸರಳತೆ, ದಯೆ, ಸ್ನೇಹದಿಂದ ವಿಶ್ವಾಸಪಾಲನೆ, ಯತಾರ್ಥ ವರ್ಣನೆ, ಕರ್ತವ್ಯಗಳ ಹಾಗು ದಾಯಿತ್ವಗಳ ವಹನೆ, ಅಧಿಕ ಉತ್ಪಾದನೆ, ಕಡಿಮೆ ಉಪಭೋಗ, ಉತ್ಸಾಹ ಹಾಗು ಚೇಷ್ಟೆ, ರಹಸ್ಯ ಹೀನತೆ, ಸಹಜತೆ ಹಾಗು ಸದ್ಭಾವ ಸುಸಂಸ್ಕಾರಗಳ ಲಕ್ಷಣ. ಲಕ್ಷಣಗಳ ಆಧಾರದ ಮೇಲೆಯೇ ಸ್ವಭಾವ, ತದನುಸಾರವೇ ಮೌಲೀಕರಣೆಯ ಕ್ರಿಯೆ ಇರುತ್ತದೆ. ಲಕ್ಷಣ ವಿಹೀನ ಮಾನವ ಇಲ್ಲ.

ಮಾನವ ಸ್ವತಂತ್ರ ಅಥವಾ ಸ್ವೇಚ್ಛಿಕ ಜೀವನದ ಪ್ರತಿ ಪ್ರತಿಬದ್ಧನಾಗಿದ್ದಾನೆ. ಅವನು ಕೇವಲ ಯಾಂತ್ರಿಕ ಅಲ್ಲ. ಆದ್ದರಿಂದ ಪ್ರತ್ಯೇಕ ಮಾನವ ಇಕಾಯಿ ಸಂವೇದನಶೀಲ ಹಾಗು ಸಂಜ್ಞಾನಶೀಲನಾಗಿರುತ್ತಾನೆ ಹಾಗು ಪೂರ್ಣನಾಗಲು ಪ್ರಯಾಸದಲ್ಲಿ ನಿರತನಾಗಿರುತ್ತಾನೆ.

ಸಮಾಧಾನ ಹಾಗು ಅನುಭವ ಯೋಗ್ಯ ಕ್ಷಮತೆಯ ತನಕ ಜಾಗೃತಿ ಭಾವಿ ಆಗಿದೆ. ಸಂವೇದನೆಶೀಲತೆ ಹಾಗು ಸಂಜ್ಞಾನೀಯತೆಯಿಂದಲೇ ನಿಯಂತ್ರಣ ಆಗುತ್ತದೆ. ಈ ಕ್ರಮ ಪ್ರತ್ಯಾವರ್ತನೆ ಹಾಗು ಪರಾವರ್ತನೆಯಲ್ಲಿ ಸಮರಸ್ಯತೆ ತನಕ ಶೃಂಖಲೆಬದ್ಧ ಪದ್ಧತಿಯಲ್ಲಿ ಆಗುತ್ತಲಿರುತ್ತದೆ.

ಪರಾವರ್ತನೆ ಪ್ರಕ್ರಿಯೆಯಿಂದಲೇ ಪ್ರತಿಭೆಯ ಅಭಿವ್ಯಕ್ತಿ ಮಾನವನಲ್ಲಿ ಮಾನವೀಯತೆ ಹಾಗು ಅತಿಮಾನವೀಯತೆಯ ರೂಪದಲ್ಲಿ ಪ್ರತ್ಯಕ್ಷವಾಗಿದೆ. ಇವುಗಳ ಕ್ರಿಯೆ ಸಂಪನ್ನತೆ ಮೂಲಕ ವಾಂಚ್ಛಿತ, ಲಕ್ಷ್ಯದ ಮತ್ತು ಕಾರ್ಯಕ್ರಮ ಹಾಗು ಪದ್ಧತಿಯ ಪ್ರಸಾರಣೆ ಆಗುವುದೂ ಭಾವಿ ಆಗಿದೆ. ಇದರಿಂದಲೇ ಅನ್ಯ (ಅಪ್ರತ್ಯಾವರ್ತಿತ) ಜ್ಞಾನಾತ್ಮಗಳ ತಮ್ಮಲಿಯೇ ಪ್ರತ್ಯಾವರ್ತನೆ ಯೋಗ್ಯ ವ್ಯಂಜನ ಸಂಪನ್ನವಾಗುವುದು ಪ್ರತ್ಯಕ್ಷವಾಗಿದೆ.

ಗುಣಾತ್ಮಕ ವ್ಯಂಜನದಿಂದ ಸುಬೋಧ, ಸುಬೋಧದಿಂದ ಸುಸಂಸ್ಕಾರ, ಸುಸಂಸ್ಕಾರದಿಂದ ಗುಣಾತ್ಮಕ ಸಂವೇದನೆ (ಸಂಜ್ಞಾನೀಯತೆಯಿಂದ ಸಂವೇದನೆಗಳು ನಿಯಂತ್ರಿತವಾಗಿರುವುದು), ಗುಣಾತ್ಮಕ ಸಂವೇದನೆಯಿಂದ ಸತ್ಯ ಸಂಕಲ್ಪ ಹಾಗು ಸತ್ಯ ಸಂಕಲ್ಪದಿಂದ ಗುಣಾತ್ಮಕ ವ್ಯಂಜನಗಳ ನಿರಂತರತೆ ಇದೆ.

ಸ್ಥಿತಿ ಹಾಗು ಕ್ರಿಯೆ ಸಂಕೇತ ಗ್ರಹಿಸುವ ಕ್ಷಮತೆಯೇ ವ್ಯಂಜನೀಯತೆ.

ಸಂಕೇತ ಗ್ರಹಿಸುವ ಪ್ರಕ್ರಿಯೆ ಬದ್ಧ ಜ್ಞಾನ, ಪ್ರಾಪ್ಯವನ್ನು ಪಡೆಯುವುದು, ಅದನ್ನು ಸುರಕ್ಷಿತವಾಗಿ ಕಾಪಾಡುವ ಕಾರ್ಯಕ್ರಮದಲ್ಲಿ ಅಭಿವ್ಯಕ್ತವಾಗಿದೆ. ಪ್ರಾಪ್ತದ ಅನುಭವ ಕ್ರಮದಲ್ಲಿ ಭಾಸ-ಆಭಾಸ ಹಾಗು ಪ್ರತೀತೀ ಜ್ಞಾಪಕವಾಗಿದೆ (ಸತ್ಯಾಪಿತ ಆಗುವುದಾಗಿದೆ).

ಮಾನವ ಮತ್ತವರಿಗೂ ಸಂಕೇತ ಪ್ರಸಾರ ಮಾಡುತ್ತಾನೆ.

ಸಂಕೇತ ಗ್ರಹಿಸುವ ಕ್ರಿಯೆಯೇ ಅನುಮಾನಾರೋಪಣ ಹಾಗು ಅನುಮಾನಾಂಕುರವೂ ಆಗಿರುತ್ತದೆ, ಇವುಗಳು ಸಂಕಲ್ಪ, ಇಚ್ಛೆ, ವಿಚಾರ ಹಾಗು ಆಶೆ ಕ್ರಿಯೆಗಳು.

ಐದು ಇಂದ್ರಿಯಗಳಮೂಲಕ ರಸಗಳ ವ್ಯಜನ ಮನಸ್ಸಿನ ಮೇಲೆ, ಇಂದ್ರಿಯ ಸಮೂಹ ಹಾಗು ಮನಸ್ಸಿನ ಮೂಲಕ ತಾತ್ವಿಕ ವ್ಯಂಜನ ವೃತ್ತಿಯ ಮೇಲೆ, ಇಂದ್ರಿಯ ಮನಸ್ಸು ಹಾಗು ವೃತ್ತಿಯ ಮೂಲಕ ಭಾವಗಳ (ಮೌಲ್ಯಗಳ) ವ್ಯಂಜನ ಚಿತ್ತಿನ ಮೇಲೆ, ತಥಾ ಇಂದ್ರಿಯ, ಮನಸ್ಸು, ವೃತ್ತಿ ಮತ್ತು ಚಿತ್ತ ಮೂಲಕ ಸ್ಥಿತಿವತ್ತಾ ಮತ್ತು ಸತ್ಯವತ್ತಾವಿನ ವ್ಯಂಜನ ಬುದ್ಧಿಯ ಮೇಲೆ, ಅವರ ಜಾಗೃತಿ ಮತ್ತು ಅಭ್ಯಾಸದ ಸ್ತರದ ಅನುರೂಪ ಕಂಡುಬರುತ್ತದೆ.

ವಾತಾವರಣಸ್ತ ಕ್ರಿಯೆ ಸಂಕೇತ ಗ್ರಹಿಸುವುದು ಮತ್ತು ಪ್ರಸಾರ ಕ್ಷಮತೆಯೇ ವ್ಯಂಜನ.

ಪ್ರತ್ಯೇಕ ಸಂಕೇತದ ಪೂರ್ವ ಅಧಿಷ್ಠಿತ ಆಶೆ, ವಿಚಾರ, ಇಚ್ಛೆ ಮತ್ತು ಸಂಕಲ್ಪಗಳಿಗೆ ಅವು ಸಂಕೇತ ಪುನರಾಕಾರ ನೀಡುತ್ತದೆ. ಇದು ವರ್ತಮಾನದಲ್ಲಿ ಪ್ರತ್ಯಕ್ಷವಾಗಿದೆ. ಫಲವಾಗಿ ಮಾನವನಲ್ಲಿ ಅನೇಕ ವೈವಿಧ್ಯತೆಗಳು ಕುಶಲತೆ, ನಿಪುಣತೆ, ಕಲೆ, ವಿಚಾರ ಮತ್ತು ಆಶೆಯ ರೂಪದಲ್ಲಿ ಪ್ರಕಟವಾಗುತ್ತದೆ ಜೊತೆಗೆ ಪಾಂಡಿತ್ಯದಲ್ಲಿ, ಪಾಂಡಿತ್ಯದಿಂದ, ಪಾಂಡಿತ್ಯಗಾಗಿಯೇ ಸಾರ್ವಭೌಮತೆ ಇದೆ.

ಶರೀರದ ಮೂಲಕ ವ್ಯವಹಾರ, ಹೃದಯದ ಮೂಲಕ ಶರೀರ, ಪ್ರಾಣದ ಮೂಲಕ ಹೃದಯ ಹಾಗು ಮನಸ್ಸಿನ ಮೂಲಕ ಪ್ರಾಣದ ಸಂಚಾರ ಪ್ರಸಿದ್ಧವಾಗಿದೆ.

